ಸಂಪುಟ : 8 ಸಂಚಿಕೆ : 219 ಪುಟ : 4 ಬೆಲೆ : 3.00 ಗುರುವಾರ ಅಕ್ಟೋಬರ್ 05, 2023 Mob : 9448326533- 9019256545 ಗದಗ

ಸಂಪಾದಕರು : ಎಚ್.ಎಮ್ ಶರೀಫನವರ್

# ವಿಜಯ ಸಾಕ್ಷಿ

ವಾಸ್ತವ, ವಸ್ತುನಿಷ್ಠ, ವಿಭಿನ್ನ...

VIJAYA SAKSHI KANNADA DAILY ಕನ್ನಡ ದಿನಪತ್ರಿಕೆ




Volume : 8 Issue : 219 Pages : 4 Price : 3.00 Thursday October 05, 2023 Gadag RNI No: KARKAN/2015/63412 E-mail: vijayasakshidaily@gmail.com Post Regn.No: GDG/72/2023-25

## ಗದಗ-ಬೆಟಗೇರಿ ಅವಳಿ ನಗರದಲ್ಲಿ ಇಂದು ನೀರು ಪೂರೈಕೆ ಎಲ್ಲೆಲ್ಲಿ?

**■ ವಿಜಯಸಾಕ್ಷಿ ಸುದ್ದಿ, ಗದಗ**

ಗದಗ ಬೆಟಗೇರಿ ಅವಳಿ ನಗರದಲ್ಲಿ ಅಕ್ಟೋಬರ್ 5 ರಂದು ಕೆಳಗಿನ ಸ್ಥಳಗಳಿಗೆ ನೀರು ಪೂರೈಕೆ ಮಾಡಲಾಗುವುದು.

**ಸ್ಥಳಗಳ ವಿವರ:** ವಾರ್ಡ್ ನಂ. 29 ರಲ್ಲಿ ರಾಜೀವ ಗಾಂಧಿನಗರ ಪೊಲೀಸ್ ಸ್ಟೇಷನ್ ಕೆಳಭಾಗ ಸ್ವಿಮ್ಮಿಂಗ್ ಪೂಲ್, ಭಾಂಡಗೆ ಲೈನ್, ಕೊಪ್ಪಳ ದವಾಖಾನೆ ಲೈನ್, ಶಿಕ್ಷಕರ ಬಡಾವಣೆ ಉಳಿದ ಭಾಗಗಳು. ವಾರ್ಡ್ ನಂ. 22 ರಲ್ಲಿ ಗರಡಿಮನಿ ದಖನಿ ಲೈನ್, ಗಿರಣಿ ಲೈನ್, ಈಶ್ವರ ಗುಡಿ ಲೈನ್, ಮಾರುತಿ ಲೈನ್, ಅಪಾರ್ಟ್ಮೆಂಟ್, ವಾರ್ಡ್ ನಂ 24, 26 ರಲ್ಲಿ ಮಕಾನಗಲ್ಲಿ, ಹಳೆ ಡಿಸಿ ಸರ್ಕಲ್, ಸಾಲಿ ಮನೆ, ಅಬ್ಬಿಗೇರಿ ಕಾಂಪೌಂಡ್, ಉಡಚಮ್ಮನ ಗುಡಿ ಲೈನ್, ವಾರ್ಡ್ ನಂ. 16 ರಲ್ಲಿ ಡಿಸಿ ಮಿಲ್ ರೋಡ್ ಡೋರಗಲ್ಲಿ, ವಾರ್ಡ್ ನಂ. 12, 13 ರಲ್ಲಿ ಸಂಜೀವಿನಿ ಆಸ್ಪತ್ರೆ ಲೈನ್, ಭಾಗಮಾರ್ ಲೈನ್, ಹೊಂಬಾಳೆ ಲೈನ್, ಸಾಯಿಬಾಬಾ ಲೈನ್, ಕೊಳಚೆ ಪ್ರದೇಶ, ಗರಗದವರ ಲೈನ್, ನಾವಳ್ಳಿ ಅವರ ಲೈನ್, ಶಾಮ್ ಕುಲಕರ್ಣಿ ಎರಡನೆ ಕ್ರಾಸ್, ದುರ್ಗಾ ಬೇಕರಿ ಲೈನ್, ನಾಶಿಯವರ ಲೈನ್, ದ್ಯಾಮನಗೌಡ್ರು ಲೈನ್, ಬರದೂರ ಲೈನ್, ಲೋಕಜ್ಞಾನ ಲೈನ್, ವಸ್ತ್ರದರ ಲೈನ್, ಕರಡಿಯವರ ಲೈನ್ ಒಂದನೇ ಕ್ರಾಸ್, ಕೊಟ್ಟೂರು ಲೈನ್, ಕಿರೆಸೂರ ಲೈನ್, ಜೆ ಟಿ ಕಾಲೇಜ್ ಲೈನ್, ಮುಧೋಳ ಲೈನ್, ಮಾಲಿಪಾಟೀಲ್ ಗುಳೇದರ ಲೈನ್, ಅರಶಿದ್ದಿಯವರ ಲೈನ್, ವಿವೇಕಾನಂದ ರೋಡ್ ಲೈನ್, ವಾರ್ಡ್ ನಂ. 30, 34, 35 46 ಪ್ಲಾಟ್ ಲೈನ್, ವಡ್ಡರಗೇರಿ, ಮೂರು ಶಿಲ್ಪಿನ, ವಕಾರ, ರಾಣಿ ಚೆನ್ನಮ್ಮನ ಲೈನ್, ಬಸ್ ಡಿಪೋ ಲೈನ್ ಹಿಂದಿನ ಭಾಗ, ಬಸವೇಶ್ವರ ಸ್ಕೂಲ್ ಹಿಂದಿನ ಭಾಗ, ಮುಂದಿನ ಭಾಗ, ವಾರ್ಡ್ ನಂ. 19, 24, 25 ಕುರಬರ ಗರಡಿ, ಮಾಬು ಸುಬಾನಿ ಕಟ್ಟಿ, ಕೊಪ್ಪದ ಲೈನ, ಖಾನ್ ತೋಟ ಭಾಗ-1 ಭಾಗ-2 ಆಳದಿಬ್ಬ ಭಾಗ-1 ಭಾಗ-2 ಭಾಗ-3 ಅಬ್ಬಿಗೇರಿ ಲೈನ್, ಕರುಗಲ್ಲ ಓಣಿ, ಪುಣೇಕರ ಲೈನ್, ಕರಿ ದೇವರ ಗುಡಿ, ಜಿಎಸ್ ಹಿರೇಮಠ ಲೈನ್, ಹನುಮಾನ ಗರಡಿ, ಮದ್ಲಿ ಓಣಿ, ಜೀರ ಓಣಿ, ಗಣಪತಿ ಗುಡಿ, ಜವಳಿ ಬಜಾರ್. ತಾಂತ್ರಿಕವಾಗಿ ನೀರು ಪೂರೈಕೆಯಲ್ಲಿ ಒಂದು ವೇಳೆ ಅಡತಡೆಯಾದಲ್ಲಿ ಸಾರ್ವಜನಿಕರು ನಗರಸಭೆಯೊಂದಿಗೆ ಸಹಕರಿಸಬೇಕೆಂದು ಗದಗ ಬೆಟಗೇರಿ ನಗರಸಭೆ ಪೌರಾಯುಕ್ತರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

### ರೋಣ ಮತಕ್ಷೇತ್ರದ ಪ್ರಗತಿ ಪರಿಶೀಲನಾ ಸಭೆಯಲ್ಲಿ ಶಾಸಕ ಜಿ.ಎಸ್ ಪಾಟೀಲ ಅಸಮಾಧಾನ

# ಸರ್ಕಾರದ ಅನುದಾನವಿದ್ದರೂ ನಿಗದಿತ ಅಭಿವೃದ್ಧಿಯಿಲ್ಲ



ರೋಣ, ಗಜೇಂದ್ರಗಡ, ಮುಂಡರಗಿ ತಾಲೂಕಿನ ತಹಸೀಲ್ದಾರರು ಸಭೆಯ ಗಂಭೀರತೆಯನ್ನು ಮರೆತು ಮಾತಿನಲ್ಲಿ ಮಗ್ನರಾಗಿದ್ದು ಸಭೆಯಲ್ಲಿ ಕಂಡುಬಂದಿತು. ಯೋಜನಾ ನಿರ್ದೇಶಕರಾದ ಎಂ.ವ್ಹಿ ಚಳಗೇರಿಯವರು, ಮಾತನಾಡಬೇಡಿ ಎಂದರೂ ಸಹ ಈ ಮೂವರು ತಹಸೀಲ್ದಾರರು ಮಾತ್ರ ತಮ್ಮ ಮಾತನ್ನು ಮುಂದುವರೆಸಿದ್ದು, ಸಭೆಯಲ್ಲಿ ಹಾಜರಿದ್ದ ಇತರ ಅಧಿಕಾರಿಗಳೂ ಸೇರಿದಂತೆ ಪತ್ರಕರ್ತರಿಗೂ ಮುಜುಗುರವನ್ನು ತರಿಸಿತ್ತು.

**■ ವಿಜಯಸಾಕ್ಷಿ ಸುದ್ದಿ, ರೋಣ**

ಸರಕಾರದ ಮಟ್ಟದಲ್ಲೇ ಭೂ ಸೇನಾ ನಿಗಮದ ಸಮಾಧಾನಕರ ಅಭಿಪ್ರಾಯಗಳಿಲ್ಲ. ಹೀಗಿರುವಾಗ, ಸಾರ್ವಜನಿಕರು ನಿಮ್ಮ ಬಗ್ಗೆ ದೂರುಗಳನ್ನು ಹೇಳುವುದರಲ್ಲಿ ತಪ್ಪೇನಿದೆ ಎಂದು ಭೂ ಸೇನಾ ನಿಗಮದ ಎಇಇ ವಿರುದ್ಧ ಶಾಸಕ ಜಿ.ಎಸ್ ಪಾಟೀಲ ಅಸಮಾಧಾನ ವ್ಯಕ್ತಪಡಿಸಿದರು.

ಅವರು ಬುಧವಾರ ತಾ.ಪಂ ಸಭಾಭವನದಲ್ಲಿ ಜರುಗಿದ ರೋಣ ಮತಕ್ಷೇತ್ರದ ಪ್ರಗತಿ ಪರಿಶೀಲನಾ ಸಭೆಯ ಅಧ್ಯಕ್ಷತೆಯನ್ನು ವಹಿಸಿ ಮಾತನಾಡಿದರು.

> ಮಾರನಬಸರಿ ಗ್ರಾಮದ ಪ್ರೌಢಶಾಲಾ ಕಟ್ಟಡ ನಿರ್ಮಾಣಕ್ಕೆ ಅನುದಾನ ಬಿಡುಗಡೆಗೊಂಡಿದ್ದರೂ ಸಹ ವಿಳಂಬ ನೀತಿ ಅನುಸರಿಸುತ್ತಿರುವುದು ಸಮಂಜಸವಲ್ಲ. ಕೂಡಲೇ ಭೂ ಸೇನಾ ನಿಗಮದವರು ಕಟ್ಟಡ ಕಾಮಗಾರಿಯನ್ನು ಕೈಗೆತ್ತಿಕೊಳ್ಳಬೇಕು. ಇಲಾಖೆಯವರು 2 ಅಥವಾ 3 ಲಕ್ಷ ರೂ.ಗಳಲ್ಲಿ ಶಾಲೆಯ ದುರಸ್ತಿ ಕಾಮಗಾರಿ ಮಾಡುವ ಬದಲು, ಒಂದು ಕೊಠಡಿ ಅಥವಾ ಶಾಲೆಯನ್ನು ಆಯ್ಕೆ ಮಾಡಿಕೊಂಡು, ಅದನ್ನು ಅಭಿವೃದ್ಧಿಪಡಿಸಿ. ಅಂದಾಗಲೇ ಶಾಲೆಗಳು ಸುಧಾರಣೆಯಗಲು ಸಾಧ್ಯ.
>
> **– ಜಿ.ಎಸ್ ಪಾಟೀಲ.**
> ಶಾಸಕರು, ರೋಣ.

ಸರಕಾರ ನಿಮ್ಮ ನಿಗಮಕ್ಕೆ ಅನುದಾನವನ್ನು ನೀಡಿದೆ. ಆದರೂ ಸಹ ಅಭಿವೃದ್ಧಿ ಕಾರ್ಯಗಳು ಪ್ರಗತಿಯತ್ತ ಸಾಗುತ್ತಿಲ್ಲ. ಗೋಗೇರಿ ಗ್ರಾ.ಪಂನಿಂದ 60 ಲಕ್ಷ ರೂ.ಗಳ ಅನುದಾನವನ್ನು ಪಡೆದರೂ ಸಹ ಕಾಮಗಾರಿಯನ್ನು ಸಮರ್ಥವಾಗಿ ನಿರ್ವಹಿಸುವಲ್ಲಿ ವಿಫಲರಾಗಿದ್ದೀರಿ. ಮುಖ್ಯವಾಗಿ, ವರ್ಷಗಳು ಕಳೆದರೂ ಸಹ ನೀವು ಕಾಮಗಾರಿಗಳತ್ತ ಮುಖ ಮಾಡುವುದಿಲ್ಲ ಎಂದು ತರಾಟೆಗೆ ತೆಗೆದುಕೊಳ್ಳುತ್ತಿದ್ದಂತೆ ತಾ.ಪಂ ಇಒ, ಪಿಡಿಒ ಸೇರಿದಂತೆ ತಾಲೂಕಾ ಮಟ್ಟದ ಅಧಿಕಾರಿಗಳು ಭೂ ಸೇನಾ ನಿಗಮದ ಎಇಇ ಸುಜಾತಾ ಕಾಳೆ ವಿರುದ್ಧ ದೂರಿನ ಸುರಿಮಳೆಗೈದರು. ಇದರಿಂದ ವಿಚಲಿತರಾದ ಶಾಸಕರು, ನಿಮ್ಮ ಇಲಾಖೆಯ ಬಗ್ಗೆ ಯಾರ ಅಭಿಪ್ರಾಯವೂ ಸರಿಯಿಲ್ಲ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಜಿ.ಪಂ ನಿಂದ ನಿರ್ಮಿಸಲ್ಪಡುತ್ತಿರುವ ಅಂಗನವಾಡಿ ಕಟ್ಟಡಗಳ ಬಗ್ಗೆ ಮಾಹಿತಿಯನ್ನು ಶಾಸಕ ಜಿ.ಎಸ್ ಪಾಟೀಲ ಕೇಳುತ್ತಿದ್ದಂತೆ, ಗಲಿಬಿಲಿಗೊಂಡ ಜಿ.ಪಂ ಎಇಇ ಗೋಪಾಲ ನಾಯ್ಕರವರು ಸರಿಯಾದ ಮಾಹಿತಿ ನೀಡುವಲ್ಲಿ ತಡವರಿಸುತ್ತಿದ್ದಂತೆ, ನಿಮಗೆ ಮಾಹಿತಿ ಇಲ್ಲವೆಂದಾದರೆ, ಸಿಬ್ಬಂದಿಗಳ ಬಳಿಯಾದರೂ ಕೇಳಿ ತಿಳಿದುಕೊಳ್ಳಿ ಎಂದು ಶಾಸಕರು ಸೂಚಿಸಿದರು. ಆದರೆ, ಈ ಬಗ್ಗೆ ಇಲಾಖೆಯ ಅಭಿಯಂತರರ ಬಳಿಯೂ ಸೂಕ್ತ ಮಾಹಿತಿ ಇರಲಿಲ್ಲ. ಇದರಿಂದ ಕುಪಿತರಾದ ಶಾಸಕರು, ಅಂಗನವಾಡಿ ಕಟ್ಟಡಗಳನ್ನಾದರೂ ಕಟ್ಟಿದ್ದೀರಾ? ಯಾವ ವಾರ್ಡ್, ಯಾವ ಸ್ಥಳದಲ್ಲಿ ನಿರ್ಮಿಸಿದ್ದೀರೆಂದು ಪ್ರಶ್ನಿಸಿದಾಗ, ಜಿ.ಪಂ ಅಧಿಕಾರಿಗಳು ಮೌನಕ್ಕೆ ಶರಣಾದರು. ಅಧಿಕಾರಿಗಳ ಈ ನಿರ್ಲಕ್ಷ್ಯ ಧೋರಣೆಯಿಂದ ಅಸಮಾಧಾನಗೊಂಡ ಶಾಸಕ ಜಿ.ಎಸ್ ಪಾಟೀಲ, ಕಟ್ಟಡಗಳ ಬಗ್ಗೆ ಸಮಗ್ರ ಮಾಹಿತಿಯನ್ನು ಒದಗಿಸುವಂತೆ ಸೂಚಿಸಿದರು.

ಯೋಜನಾಧಿಕಾರಿ ಎಂ.ವ್ಹಿ ಚಳಗೇರಿ, ಸಮಾಜ ಕಲ್ಯಾಣ ಇಲಾಖೆಯ ಜಿಲ್ಲಾ ಅಧಿಕಾರಿ ಪ್ರಶಾಂತ ವರಗಪ್ಪನವರ, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಜಿಲ್ಲಾ ಅಧಿಕಾರಿಗಳಾದ ರವಿ.ಎಲ್ ಗುಂಜೀಕರ್, ಬಸವರಾಜ್ ಬಳ್ಳಾರಿ ಹಾಗೂ ವಿವಿಧ ಇಲಾಖೆಗಳ ತಾಲೂಕು ಮಟ್ಟದ ಅಧಿಕಾರಿಗಳು ಮತ್ತು ಜಿಲ್ಲಾಮಟ್ಟದ ಅಧಿಕಾರಿಗಳು ಉಪಸ್ಥಿತರಿದ್ದರು.

### ಟಾಸ್ಕ್‌ಫೋರ್ಸ್ ಸಭೆಯಲ್ಲಿ ಶಾಸಕ ಜಿ.ಎಸ್ ಪಾಟೀಲ ಹೇಳಿಕೆ

# ರೈತರಿಗೆ ಅನ್ಯಾಯವಾದರೆ ಸಹಿಸುವುದಿಲ್ಲ



**■ ವಿಜಯಸಾಕ್ಷಿ ಸುದ್ದಿ, ರೋಣ**

ರೋಣ, ಗಜೇಂದ್ರಗಡ ತಾಲೂಕುಗಳನ್ನು ಸರಕಾರ ಈಗಾಗಲೇ ಬರಪೀಡಿತ ತಾಲೂಕುಗಳೆಂದು ಘೋಷಣೆ ಮಾಡಿದ್ದು, ಇಂತಹ ಸಂದರ್ಭದಲ್ಲಿ ರೈತರಿಗೆ ಅನ್ಯಾಯವಾದರೆ ನಾನು ಸಹಿಸುವುದಿಲ್ಲ ಎಂದು ಶಾಸಕ ಜಿ.ಎಸ್ ಪಾಟೀಲ ಹೇಳಿದರು.

> ಬರಗಾಲದ ಸಂದರ್ಭದಲ್ಲಿ ಅಧಿಕಾರಿಗಳು ಕೇಂದ್ರ ಸ್ಥಾನದಲ್ಲಿದ್ದು ರೈತರ ಸಮಸ್ಯೆಗಳಿಗೆ ಸ್ಪಂದಿಸುವ ಕೆಲಸ ಮಾಡಬೇಕು. ಕುಡಿಯುವ ನೀರಿನ ತೊಂದರೆಯಾಗದಂತೆ ನಿಗಾ ವಹಿಸಬೇಕು. ಮುಖ್ಯವಾಗಿ ನೀರಿನ ಸಮಸ್ಯೆಯಿರುವ ಗ್ರಾಮಗಳ ಕುರಿತು ಈಗಲೇ ಪಟ್ಟಿ ತಯಾರಿಸಿಕೊಂಡು, ಸಮಸ್ಯೆ ನಿವಾರಣೆಗೆ ಅಗತ್ಯ ಕ್ರಮಗಳನ್ನು ತೆಗೆದುಕೊಳ್ಳಬೇಕು. ನಿರ್ಲಕ್ಷ್ಯ ವಹಿಸಿದರೆ ಕಠಿಣ ಕ್ರಮಗಳನ್ನು ಎದುರಿಸಬೇಕಾಗುತ್ತದೆ.
>
> **– ಜಿ.ಎಸ್ ಪಾಟೀಲ.**
> ಶಾಸಕರು, ರೋಣ.

ಅವರು ಬುಧವಾರ ಸಂಜೆ ತಾ.ಪಂ ಸಭಾಭವನದಲ್ಲಿ ಜರುಗಿದ ಟಾಸ್ಕ್‌ಫೋರ್ಸ್ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ರೋಣ, ಗಜೇಂದ್ರಗಡ ತಾಲೂಕಿನ ಎಲ್ಲ ರೈತರಿಗೂ ಬೆಳೆ ಹಾನಿ ಪರಿಹಾರ ಮೊತ್ತ ದೊರಕಬೇಕು. ಯಾವ ರೈತರೂ ನಮಗೆ ಬೆಳೆ ಹಾನಿ ಪರಿಹಾರ ಬಂದಿಲ್ಲ ಎಂದು ದೂರಬಾರದು. ಆ ನಿಟ್ಟಿನಲ್ಲಿ ಅಧಿಕಾರಿಗಳು ಕ್ರಮ ಕೈಗೊಳ್ಳಬೇಕು. ಮುಖ್ಯವಾಗಿ ಜಾನುವಾರುಗಳಿಗೆ ಮೇವಿನ ಕೊರತೆಯಾಗದಂತೆ ನೀಗಾವಹಿಸಬೇಕು ಎಂದು ಸೂಚಿಸಿದರು.

ಕೃಷಿ ಇಲಾಖೆಯ ಸಹಾಯಕ ನಿರ್ದೇಶಕ ರವೀಂದ್ರ ಪಾಟೀಲ ಮಾತನಾಡಿ, ಎರಡೂ ತಾಲೂಕುಗಳಲ್ಲಿ ಮಳೆ ಕೊರತೆಯಿಂದ 69.800 ಹೆಕ್ಟೇರ್ ಪ್ರದೇಶದಲ್ಲಿ ಬೆಳೆಹಾನಿಯಾಗಿದೆ. ಶೇ.98ರಷ್ಟು ಸಮೀಕ್ಷೆ ಕಾರ್ಯ ಮುಕ್ತಾಯಗೊಂಡಿದೆ. ಮುಂದಿನ 3-4 ದಿನಗಳಲ್ಲಿ ರೈತರ ಖಾತೆಗಳಿಗೆ ಒಂದು ಹೆಕ್ಟೇರ್‌ವರೆಗೆ ಪರಿಹಾರ ಮೊತ್ತವನ್ನು ▸▸3 ನೇ ಪುಟಕ್ಕೆ

### ಕಾಮನ್‌ವೆಲ್ತ್ ಪಾರ್ಲಿಮೆಂಟ್ ಸಮ್ಮೇಳನದಲ್ಲಿ ಸಭಾಪತಿ ಬಸವರಾಜ ಹೊರಟ್ಟಿ ಅಭಿಪ್ರಾಯ

# ಇಂಧನ ಕೊರತೆ ನೀಗಿಸಲು ಪರಿಸರ ಕಾಳಜಿಯೊಂದೇ ದಾರಿ




**■ ವಿಜಯಸಾಕ್ಷಿ ಸುದ್ದಿ, ನವದೆಹಲಿ**

ದಿನದಿಂದ ದಿನಕ್ಕೆ ಜಗತ್ತು ಬೆಳೆಯುತ್ತಿದೆ. ಮುಂದಿನ ದಿನಗಳಲ್ಲಿ ಇಂಧನ ಕೊರತೆಯನ್ನು ಅನುಭವಿಸುವ ಲಕ್ಷಣಗಳು ಈಗಾಗಲೇ ಕಾಣುತ್ತಿವೆ. ಇಂಧನ ಕೊರತೆ ನೀಗಿಸಲು ಹಾಗೂ ಮುಂದಿನ ಪೀಳಿಗೆ ಕ್ಷಮಿಸಬೇಕೆಂದರೆ ಪರಿಸರ ಕಾಳಜಿ ಒಂದೇ ಪರ್ಯಾಯ ಮಾರ್ಗ ಎಂದು ಸಭಾಪತಿ ಬಸವರಾಜ ಹೊರಟ್ಟಿಯವರು ಅಭಿಪ್ರಾಯಪಟ್ಟರು.

ಅವರು ಪಶ್ಚಿಮ ಆಫ್ರಿಕಾ ದೇಶದ ಅಕ್ರಾದಲ್ಲಿ ನಡೆದ 66ನೇ ಕಾಮನವೆಲ್ತ್ ಪಾರ್ಲಿಮೆಂಟ್ ಸಮ್ಮೇಳನ(ಸಿ.ಪಿ.ಸಿ) ದಲ್ಲಿ ಕರ್ನಾಟಕದ ಪ್ರತಿನಿಧಿಯಾಗಿ ಭಾಗವಹಿಸಿ 'ಇಂಧನ ಕೊರತೆ ನೀಗಿಸುವಲ್ಲಿ ಪರಿಸರದ ಪಾತ್ರ' ಕುರಿತು ವಿಷಯ ಮಂಡನೆ ಮಾಡಿ ಮಾತನಾಡಿದರು.

ಇಂಧನ ಮನುಷ್ಯನ ಅವಿಭಾಜ್ಯ ಅಂಗವಾಗಿದೆ. ಅತಿಯಾದ ಇಂಧನ ಬಳಕೆಯಿಂದ ಪರಿಸರದ ಮೇಲೆ, ಜನಸಾಮಾನ್ಯರ ಆರೋಗ್ಯದ ಮೇಲೆ ಸಾಕಷ್ಟು ದುಷ್ಪರಿಣಾಮ ಉಂಟಾಗುತ್ತಿವೆ. ಈ ಎಲ್ಲ ಸಂಗತಿಗಳ ಕುರಿತು ▸▸3ನೇ ಪುಟಕ್ಕೆ

# ನಿಯಮಿತ ಆಹಾರ-ವಿಹಾರಗಳಿಂದ ಆರೋಗ್ಯ ಕಾಪಾಡಿಕೊಳ್ಳಿ




**■ ವಿಜಯಸಾಕ್ಷಿ ಸುದ್ದಿ, ಗದಗ**

ಮನುಷ್ಯರಲ್ಲಿ ರೋಗ ಉಂಟಾಗಲು ಆಹಾರ, ಆಹಾರ ಕ್ರಮ, ವ್ಯಾಯಾಮ, ವಿಹಾರಗಳು ಮುಖ್ಯ ಕಾರಣಗಳಾಗಿದ್ದು, ನಿಯಮಿತ ಆಹಾರ-ವಿಹಾರಗಳಿಂದ ಆರೋಗ್ಯ ಕಾಪಾಡಿಕೊಳ್ಳಬಹುದು. ದೇಹದಲ್ಲಿ ಹೊಸ ರಕ್ತ ಉತ್ಪತ್ತಿಯಾಗಲು ವೈದ್ಯರ ಸಲಹೆಯ ಮೇರೆಗೆ ರಕ್ತದಾನ ಮಾಡಬೇಕು. ಇದರಿಂದ ರಕ್ತದೊತ್ತಡ, ಮಧುಮೇಹ ಸೇರಿದಂತೆ ಇತರೆ ಕಾಯಿಲೆಗಳಿಂದ ದೂರವಿರಬಹುದು ಎಂದು ಜಿಲ್ಲಾ ಆರೋಗ್ಯಾಧಿಕಾರಿ ಡಾ. ಎಸ್.ಎಸ್ ನೀಲಗುಂದ ನುಡಿದರು.

ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಹಾಗೂ ಶ್ರೇಯಸ್ ರಕ್ತ ತಪಾಸಣಾ ಕೇಂದ್ರದ ಸಹಯೋಗದಲ್ಲಿ ಉದಯ ಕೇಶವನಗರ ಗಣೇಶೋತ್ಸವ ಪ್ರಯುಕ್ತ ಏರ್ಪಡಿಸಿದ್ದ ಆರೋಗ್ಯ ತಪಾಸಣಾ ಶಿಬಿರವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ರೇಖಾ ದೀಪಕ ಕಲ್ಲಣ್ಣವರ ಎಲ್ಲ ತಜ್ಞ ವೈದ್ಯರ ಪರಿಚಯ ಮಾಡಿದರು. ಜಿಲ್ಲಾ ಸಮೀಕ್ಷಣಾಧಿಕಾರಿ ಡಾ. ವೆಂಕಟೇಶ ರಾಠೋಡ, ಹಿರಿಯ ಶಸ್ತ್ರ ಚಿಕಿತ್ಸಕ ಡಾ. ಎಚ್.ಎಲ್ ಗಿರಡ್ಡಿ, ಡಾ. ಪ್ರಕಾಶ ಗುಂಡೂರ, ಡಾ. ಅರ್ಪಿತಾ ಬಿರಾದಾರ ಅವರನ್ನು ಗೌರವಪೂರ್ವಕವಾಗಿ ಸನ್ಮಾನಿಸಲಾಯಿತು. 150ಕ್ಕೂ ಹೆಚ್ಚು ಜನರು ಶಿಬಿರದ ಪ್ರಯೋಜನ ಪಡೆದುಕೊಂಡರು.

ಬಿ.ಪಿ ಹುಚ್ಚಣ್ಣವರ, ತಮ್ಮ ಅಧ್ಯಕ್ಷೀಯ ನುಡಿಗಳನ್ನಾಡಿದರು. ಅರ್ಜುನಸಾ ಬೇವಿನಕಟ್ಟಿ, ಕೃಷ್ಣಾ ಸರ್ವದೆ, ಪ್ರಕಾಶ ಅಗಸನಕೊಪ್ಪ, ದೀಪಕ ಕಲ್ಲಣ್ಣವರ, ಮಲ್ಲಿಕಾರ್ಜುನ ತೊಂಡಿಹಾಳ, ಶರಣು ಹುಡೇದ, ಅರ್ಜುನ ಭಾಸ್ಕರ, ಬಸವರಾಜ ನುಗ್ಗಿಕೇರಿ, ವಿಶಾಲ ಬಾಕಳೆ, ಮಾಲಿಪಾಟೀಲ, ನರೇಂದ್ರ, ರಾಯಕರ, ಪಾಲನಕರ, ಬಾಗಮಾರ, ಅಮೃತರಾವ್, ಪ್ರವೀಣ ಬನ್ನಿಗೋಳ, ವಿರಕ್ತಮಠ ಹಾಗೂ ಇನ್ನಿತರರು ಶಿಬಿರದಲ್ಲಿ ಉಪಸ್ಥಿತರಿದ್ದರು.

ಮಂಗಳಾ ಯಾನಮಶೆಟ್ಟಿ ಪ್ರಾರ್ಥಿಸಿದರು. ಪ್ರಭುಗೌಡ ಪಾಟೀಲ ಸ್ವಾಗತಿಸಿದರು. ಜಿ.ಎಂ ಯಾನಮಶೆಟ್ಟಿ ನಿರೂಪಿಸಿದರು. ಬಿ.ಜಿ ಗಿರಿತಿಮ್ಮಣ್ಣವರ ವಂದಿಸಿದರು ಎಂದು ಸಂತೋಷ ಕುರ್ಡೆಕರ್ ತಿಳಿಸಿದ್ದಾರೆ.

# ಅರ್ಜಿ ಆಹ್ವಾನ

**■ ವಿಜಯಸಾಕ್ಷಿ ಸುದ್ದಿ, ಗದಗ**

2023-24ನೇ ಸಾಲಿಗೆ ಸಮಾಜ ಇಲಾಖಾ ವತಿಯಿಂದ ಅನುಷ್ಠಾನ ಮಾಡಲಾಗುತ್ತಿರುವ ಮೆಟ್ರಿಕ್ ನಂತರದ ವಿದ್ಯಾರ್ಥಿವೇತನ ಮಂಜೂರಾತಿಗಾಗಿ ಆನ್‌ಲೈನ್ ಮುಖಾಂತರ ಅರ್ಜಿಯನ್ನು ಆಹ್ವಾನಿಸಿದ್ದು, ಎಲ್ಲಾ ತಾಲೂಕುಗಳ ವ್ಯಾಪ್ತಿಯ ಕಾಲೇಜುಗಳಲ್ಲಿ ವ್ಯಾಸಂಗ ಮಾಡುತ್ತಿರುವ ಪರಿಶಿಷ್ಟ ಜಾತಿ/ಪರಿಶಿಷ್ಟ ವರ್ಗದ ವಿದ್ಯಾರ್ಥಿಗಳು ಅರ್ಜಿ ಸಲ್ಲಿಸಲು ರಾಜ್ಯ ವಿದ್ಯಾರ್ಥಿವೇತನ ತಂತ್ರಾಂಶದಲ್ಲಿ ವೆಬ್‌ಸೈಟ್ ವಿಳಾಸ: https://ssp.postmaric.karnataka.gov.in ನಲ್ಲಿ ಅಥವಾ www.sw.kar.nic.in www.sw.kar.nic.inವೆಬ್‌ಸೈಟ್‌ನಲ್ಲಿ ಅರ್ಜಿ ಹಾಕಲು ಅವಕಾಶ ಕಲ್ಪಿಸಲಾಗಿದೆ.

ಹೆಚ್ಚಿನ ಮಾಹಿತಿಗಾಗಿ ಆಯಾ ತಾಲೂಕಿನ ಸಹಾಯಕ ನಿರ್ದೇಶಕರಗಳ ಕಚೇರಿಗಳಾದ ಸಹಾಯಕ ನಿರ್ದೇಶಕರ ಕಚೇರಿ ಗದಗ ದೂರವಾಣಿ ಸಂಖ್ಯೆ: 08372-297258/9480843128, ಸಹಾಯಕ ನಿರ್ದೇಶಕರ ಕಚೇರಿ ಮುಂಡರಗಿ ದೂರವಾಣಿ ಸಂಖ್ಯೆ:08371-262449/9480843129, ಸಹಾಯಕ ನಿರ್ದೇಶಕರ ಶಿರಹಟ್ಟಿ ಕಚೇರಿ ದೂರವಾಣಿ ಸಂಖ್ಯೆ: 08487-242312/9480843132 ಸಹಾಯಕ ನಿರ್ದೇಶಕರ ರೋಣ ಕಚೇರಿ ದೂರವಾಣಿ ಸಂಖ್ಯೆ:08381-267120/9480843131 ಸಹಾಯಕ ನಿರ್ದೇಶಕರ ನರಗುಂದ ಕಚೇರಿ ದೂರವಾಣಿ ಸಂಖ್ಯೆ: 08377-245731/ 9480843130 ಗಳಿಗೆ ಸಂಪರ್ಕಿಸಬಹುದಾಗಿದೆ.

ವಿದ್ಯಾರ್ಥಿಗಳು ತಮ್ಮ ಬ್ಯಾಂಕ್ ಖಾತೆಗೆ ಕಡ್ಡಾಯವಾಗಿ ಆಧಾರ ಸೀಡಿಂಗ್ (ಎನ್.ಪಿ.ಸಿ.ಆಯ್ ಮ್ಯಾಪಿಂಗ್) ಮಾಡಿಸುವುದು ಅತೀ ಅವಶ್ಯಕವಾಗಿರುತ್ತದೆ ಎಂದು ಸಮಾಜ ಕಲ್ಯಾಣ ಇಲಾಖೆಯ ಉಪನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಪರೀಕ್ಷಾ ಪೂರ್ವ ತರಬೇತಿಯ ಪ್ರವೇಶ ಪತ್ರ ಸೇವಾಸಿಂಧು ಪೋರ್ಟಲ್‌ನಲ್ಲಿ ಲಭ್ಯ

**■ ವಿಜಯಸಾಕ್ಷಿ ಸುದ್ದಿ, ಗದಗ**

2023-24ನೇ ಸಾಲಿನಲ್ಲಿ ಐಎಎಸ್/ಕೆಎಎಸ್ ಸ್ಪರ್ಧಾತ್ಮಕ ಪರೀಕ್ಷೆಗಾಗಿ ಪರೀಕ್ಷಾ ಪೂರ್ವ ತರಬೇತಿಯ ಪ್ರವೇಶ ಪತ್ರವನ್ನು ಇಲಾಖೆಯಿಂದ ಬಿಡುಗಡೆ ಮಾಡಲಾಗಿದೆ.

ಅಭ್ಯರ್ಥಿಗಳು ಸೇವಾ ಸಿಂಧು ಆನ್‌ಲೈನ್ ಮೂಲಕ ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿದೆ.

ಅಭ್ಯರ್ಥಿಗಳು ತಮ್ಮ ಪೂರ್ಣ ಹೆಸರು ಮತ್ತು ಸೇವಾಸಿಂಧು ಅರ್ಜಿಯ ಸಂಖ್ಯೆ ಬಳಸಿ ಡೌನ್‌ಲೋಡ್ ಮಾಡಿಕೊಳ್ಳಬಹುದು. ಗದಗ ಜಿಲ್ಲೆಯ ಅಭ್ಯರ್ಥಿಗಳು ಅಕ್ಟೋಬರ್ 8 ▸▸3ನೇ ಪುಟಕ್ಕೆ

# ಅಷ್ಟಭುಜ ಈಶ್ವರ ದೇವಸ್ಥಾನ ಲೋಕಾರ್ಪಣೆ



**■ ವಿಜಯಸಾಕ್ಷಿ ಸುದ್ದಿ, ಗದಗ**

ಗದಗ ನಗರದ ಸಂಭಾಪೂರ ರಸ್ತೆಯಲ್ಲಿರುವ ಕೇಶವ ಪಾರ್ಕನಲ್ಲಿ ನೂತನವಾಗಿ ನಿರ್ಮಿಸಲಾಗಿರುವ ಅಷ್ಟಭುಜ ಈಶ್ವರ ದೇವಸ್ಥಾನದ ಲೋಕಾರ್ಪಣೆ, ದೇವರ ಮೂರ್ತಿ ಪ್ರಾಣ ಪ್ರತಿಷ್ಠಾಪನೆ ಬುಧವಾರ ಬೆಳಗ್ಗೆ ಅಡ್ನೂರ ಮಠದ ಅಭಿನವ ಪಂಚಾಕ್ಷರ ಶಿವಾಚಾರ್ಯ ಶ್ರೀಗಳ ನೇತೃತ್ವದಲ್ಲಿ, ಶುಂಭುಲಿಂಗ ಶಾಸ್ತ್ರೀಗಳಿಂದ ವಿಶೇಷ ಪೂಜೆಗಳ ಮೂಲಕ ಜರುಗಿತು.

ರಾತ್ರಿ ಜರುಗಿದ ಧರ್ಮಸಭೆಯ ಅಧ್ಯಕ್ಷತೆಯನ್ನು ಅಡ್ನೂರ ಮಠದ ಅಭಿನವ ಪಂಚಾಕ್ಷರ ಶಿವಾಚಾರ್ಯ ವಹಿಸಿದ್ದರು. ನೇತೃತ್ವವನ್ನು ಮಣಕವಾಡದ ಅಭಿನವ ಮೃತ್ಯುಂಜಯ ಶ್ರೀಗಳು, ವೀರೇಶ್ವರ ಪುಣ್ಯಾಶ್ರಮದ ಕಲ್ಲಯ್ಯಜ್ಜನವರು, ಬೆಳಹೋಡದ ಪರಿಪೂರ್ಣಾನಂದ ಭಾರತಿ ಶ್ರೀಗಳು ವಹಿಸಿದ್ದರು.

ಅತಿಥಿಗಳಾಗಿ ಜಿಪಂ ಮಾಜಿ ಅಧ್ಯಕ ಸಿದ್ಧಲಿಂಗೇಶ್ವರ ಪಾಟೀಲ, ನಗರಸಭೆ ಸದಸ್ಯೆ ಲಲಿತಾ ಅಸೂಟಿ, ನಗರಸಭೆ ಮಾಜಿ ಅಧ್ಯಕ್ಷ ಬಿ.ಬಿ.ಅಸೂಟಿ, ಮಹೇಶ ಗಾಣಿಗೇರ, ಮಂಜುನಾಥ ಬರದೂರ, ಆರ್.ಜೆ.ಸಾಹುಕಾರ, ಸುಭಾಸಪ್ಪ ಕೊಟಗಿ, ಮಧುಸೂಧನ ಪುಣೇಕರ್, ಸುರೇಶ ಶೆಟ್ಟರ್, ಜಿ.ಎಂ.ಶೆಟ್ಟರ್, ಅಶೋಕ ಮಾನ್ವಿ ಹಾಗೂ ಶಿವಕುಮಾರ ಕುಷ್ಟಗಿ ಸೇರಿದಂತೆ ಬಡಾವಣೆಯ ಹಿರಿಯರು, ಅಕ್ಕ ಪಕ್ಕದ ಬಡಾವಣೆಯ ನಿವಾಸಿಗಳು ಪಾಲ್ಗೊಂಡಿದ್ದರು. ಮಕ್ಕಳಿಂದ ಸಾಂಸ್ಕೃತಿಕ ಕಾರ್ಯಕ್ರಮ ಜರುಗಿತು.




ಇತ್ತೀಚೆಗೆ ಜರುಗಿದ ಪ.ಪೂ ವಿದ್ಯಾಲಯಗಳ ಜಿಲ್ಲಾ ಮಟ್ಟದ ಈಜು ಸ್ಪರ್ಧೆಯಲ್ಲಿ. ಶಿವಾನಂದ ಪ.ಪೂ ಕಾಲೇಜಿನ ಶಾಹಿದ ನದಾಫ್ ಮತ್ತು ಸಾಕ್ಷಿ ಬಳ್ಳಾರಿ 50ಮೀ ಹಾಗೂ 100ಮೀ ಈಜು ಸ್ಪರ್ಧೆಯಲ್ಲಿ ಪ್ರಥಮ ಸ್ಥಾನ ಪಡೆದು ರಾಜ್ಯಮಟ್ಟಕ್ಕೆ ಆಯ್ಕೆಯಾಗಿದ್ದಾರೆ. ಸಾಧಕ ವಿದ್ಯಾರ್ಥಿಗಳಿಗೆ ಶ್ರೀಮಠದ ಶ್ರೀಗಳವರು ಆಶೀರ್ವದಿಸಿದ್ದು, ವಿದ್ಯಾಸಂಸ್ಥೆಯ ಎಲ್ಲ ಪದಾಧಿಕಾರಿಗಳು, ಪ್ರಾಚಾರ್ಯ ಎಸ್.ವ್ಹಿ ವೆರ್ಣೇಕರ, ಕಾಲೇಜಿನ ಸರ್ವ ಸಿಬ್ಬಂದಿಗಳು ಅಭಿನಂದಿಸಿದ್ದಾರೆ.

## ಅಕ್ಟೋಬರ್ 6ರಿಂದ 13ರವರೆಗೆ ಯುವ ಸಂಭ್ರಮ : ಎಸ್‌ಪಿ ಸೀಮಾ ಲಾಟ್ಕರ್



■ವಿಜಯಸಾಕ್ಷಿ ಸುದ್ದಿ, ಮೈಸೂರು

ನಾಡಹಬ್ಬ ದಸರಾ ಮಹೋತ್ಸವದ ಅಂಗವಾಗಿ ನಗರದ ಮಾನಸಗಂಗೋತ್ರಿಯ ಬಯಲು ರಂಗಮಂದಿರಲ್ಲಿ ಅಕ್ಟೋಬರ್ 6 ರಿಂದ 13ರ ವರೆಗೆ ಯುವ ಸಂಭ್ರಮ ಆಯೋಜಿಸಲಾಗಿದೆ ಎಂದು ಯುವ ಸಂಭ್ರಮ ಉಪಸಮಿತಿ ವಿಶೇಷಾಧಿಕಾರಿ, ಎಸ್‌ಪಿ ಸೀಮಾ ಲಾಟ್ಕರ್ ತಿಳಿಸಿದರು.

ನಗರದ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕಚೇರಿಯಲ್ಲಿ ಮಾಧ್ಯಮಗೋಷ್ಠಿ ನಡೆಸಿ ಮಾತನಾಡಿದ ಅವರು, ದಸರಾ ಮಹೋತ್ಸವದಲ್ಲಿ ಕಾಲೇಜು ವಿದ್ಯಾರ್ಥಿ, ವಿದ್ಯಾರ್ಥಿನಿಯರ ಪ್ರತಿಭೆ ಅನಾವರಣಕ್ಕೆ ಯುವ ಸಂಭ್ರಮ ವೇದಿಕೆ ಕಲ್ಪಿಸುತ್ತದೆ. ಅದರಂತೆ ಈ ಬಾರಿಯೂ ದಸರಾದ ಮೊದಲ ಕಾರ್ಯಕ್ರಮವಾದ ಯುವ ಸಂಭ್ರಮವನ್ನು ಅ.6 ರಿಂದ ಆಯೋಜಿಸಲಾಗುತ್ತಿದೆ ಎಂದು ಹೇಳಿದರು.

ಅಕ್ಟೋಬರ್ 6 ರಂದು ಸಂಜೆ 5 ಗಂಟೆಗೆ ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಉಪಸ್ಥಿತಿಯಲ್ಲಿ ಜಿಲ್ಲಾ ಉಸ್ತುವಾರಿ ಸಚಿವ ಡಾ. ಎಚ್ ಸಿ ಮಹದೇವಪ್ಪ ಯುವ ಸಂಭ್ರಮಕ್ಕೆ ಚಾಲನೆ ನೀಡಲಿದ್ದಾರೆ. ವಿಶೇಷ ಆಹ್ವಾನಿತರಾಗಿ ತಾರಾ ದಂಪತಿ ವಶಿಷ್ಠ ಸಿಂಹ ಹಾಗೂ ಹರಿಪ್ರಿಯಾ ಕಾರ್ಯಕ್ರಮದಲ್ಲಿ ಭಾಗವಹಿಸಲಿದ್ದಾರೆ ಎಂದರು.

### ಅಪ್ರಾಪ್ತ ಮಕ್ಕಳು ಅಶ್ಲೀಲ ವಿಡಿಯೋಗಳ ವೀಕ್ಷಣೆಗೆ ಅಂಟಿಕೊಳ್ಳುತ್ತಿದ್ದಾರೆ, ಎಚ್ಚರವಿರಲಿ

# ಹರೆಯದ ಮಕ್ಕಳ ಮೇಲೆ ಗಮನವಿರಲಿ

ಇಂದಿನ ತಂತ್ರಜ್ಞಾನ ಯುಗದಲ್ಲಿ ಯಾವ್ಯಾವ ರೀತಿಯಲ್ಲೆಲ್ಲಾ ಅನುಕೂಲಗಳಾಗಿಯೆಂದು ನಾವೆಲ್ಲ ಹೆಮ್ಮೆಯಿಂದ ಬೀಗುತ್ತಿದ್ದೇವೆ. ಕಂಡ ಕಂಡ ರೀಲ್‌ಗಳಿಗೆಲ್ಲ ಲೈಕ್ ಒತ್ತುತ್ತ ನಾವೆಲ್ಲ ಯಾವುದೋ ಮಾಯಾ ಲೋಕದಲ್ಲಿ ತೇಲಾಡುತ್ತಿದ್ದೇವೆ. ಮಾಡಬೇಕಾದ ಕೆಲಸ ಮುಗಿಯುತ್ತಿದ್ದಂತೆ ಅಥವಾ ಮಾಡಬೇಕಿರುವ ಕೆಲಸವನ್ನೂ ಬದಿಗಿಟ್ಟು ಮೊಬೈಲ್ ಸ್ಕ್ರೀನ್ ಮೇಲೆಯೇ ದೃಷ್ಟಿ ನೆಡುವುದು ಹೆಚ್ಚಾಗಿದೆ. 'ನೋಡ್ರೀ, ಲೇಟೆಸ್ಟ್ ಮಾಡೆಲ್ ಮೊಬೈಲ್, ನಿನ್ನೆಯಷ್ಟೇ ತಗೊಂಡೆ ಕಣ್ರೀ' ಎನ್ನುತ್ತ ನಮ್ಮಷ್ಟಕ್ಕೆ ನಾವೇ ಹೆಮ್ಮೆ ಪಡುತ್ತಿದ್ದೇವೆ. ಆದರೆ... ಇಂಥವುಗಳಾಚೆ ಇನ್ನೇನಾಗುತ್ತಿದೆ ಎಂಬ ಬಗ್ಗೆ ನಿಜಕ್ಕೂ ಹೆಚ್ಚಿನವರಿಗೆ ಖಬರಿಲ್ಲ.

ಇಂಥವೆಲ್ಲ ಯಾಕಾಯ್ತು, ಯಾವಾಗಾಯ್ತು ಎಂಬ ಜಾಡು ಎಲ್ಲಿಯೂ ಇಲ್ಲ. ಆದರೆ, ಆಗುತ್ತಿರುವುದಂತೂ ಪರಮಸತ್ಯ. ಏನಾಗುತ್ತಿದೆ ಎಂದಿರಾ? ಈಗಿನ್ನೂ ಹದಿ ಹರೆಯಕ್ಕೆ ಕಾಲೂರುತ್ತಿರುವ ಮಕ್ಕಳು ಕಾರ್ಟೂನ್ ನೋಡುವುದನ್ನು ಬಿಟ್ಟು ಅಶ್ಲೀಲ ವಯಸ್ಕರ ಚಿತ್ರಗಳನ್ನು ನೋಡುತ್ತಿರುವುದು ಹೆಚ್ಚಾಗಿದೆ! ಸುಮ್ಮನೇ ಏನೇನೋ ಹೇಳುತ್ತಿರುವುದಲ್ಲ, ಅಧ್ಯಯನ ವರದಿಗಳೇ ಈ ವಿಷಯವನ್ನು ಬಹಿರಂಗಪಡಿಸಿವೆ. ವಿವರಗಳೂ ಇವೆ, ಒಮ್ಮೆ ಓದಿಬಿಡಿ.



ಈ ಅಧ್ಯಯನ ವರದಿಯ ಪ್ರಕಾರ, ಭಾರತದಲ್ಲಿ 13 ವರ್ಷಗಳಿಗಿಂತ ಕಡಿಮೆ ವಯಸ್ಸಿನ ಮಕ್ಕಳು ಅಶ್ಲೀಲ ವಿಡಿಯೋಗಳನ್ನು ನೋಡುತ್ತಿದ್ದಾರೆ ಮತ್ತು ದಾರಿ ತಪ್ಪುತ್ತಿದ್ದಾರೆ. ಈಗಾಗಲೇ ಸರ್ಕಾರದ ಸಂಬಂಧಿತ ಸಚಿವಾಲಯಗಳು ನಮ್ಮ ದೇಶದಲ್ಲಿ ಇಂಥ ಅದೆಷ್ಟೋ ವೆಬ್‌ಸೈಟ್‌ಗಳಿಗೆ ನಿರ್ಬಂಧ ಹೇರಿದ್ದರೂ ಕೂಡ ಬಳಕೆಯಲ್ಲಿ ಯಾವುದೇ ಇಳಿಕೆ ಕಂಡುಬಂದಿಲ್ಲ. ಬದಲಾಗಿ, ಕುತೂಹಲವನ್ನು ಇನ್ನಷ್ಟು ಹೆಚ್ಚಿಸಿ, ಇನ್ನೂ ಬುದ್ಧಿ ಬೆಳೆಯದ ಮಕ್ಕಳು ದಾರಿ ತಪ್ಪಿ ಸಾಗುತ್ತಿದ್ದಾರೆ.

ಇದು ಎಲ್ಲಿಗೆ ತಲುಪಿದೆಯೆಂಬ ಕನಿಷ್ಠ ಅಂದಾಜು ಕೂಡ ಪಾಲಕರಾದ ನಮಗಿಲ್ಲ. ಇದು ಕೇವಲ ಕುತೂಹಲದ ವೀಕ್ಷಣೆಯಷ್ಟೇ ಅಲ್ಲದೆ, ವ್ಯಸನವಾಗುವ ಹಂತವನ್ನು ತಲುಪಿಬಿಟ್ಟಿದೆ. ಬೆಂಗಳೂರಿನ ಕೇವಲ ಏಳು ವರ್ಷದ ಪುಟ್ಟ ಹುಡುಗಿಯೊಬ್ಬಳು ಮನೆಯಲ್ಲಿ ಪಾಲಕರ ನಡುವಿನ ಒಡಕಿನ ಆಘಾತವನ್ನು ನಿಭಾಯಿಸುವ ಉದ್ದೇಶದಿಂದಲೇ ನೀಲಿಚಿತ್ರಗಳ ವೀಕ್ಷಣೆಯ ವ್ಯಸನಕ್ಕೆ ಬಲಿಯಾಗುತ್ತಾಳೆಂದರೆ, ಇನ್ನೂ ಎಚ್ಚೆತ್ತುಕೊಳ್ಳದಿದ್ದರೆ ಬೇರೆ ವಿಧಿಯಿಲ್ಲ ನೋಡಿ.

ಮೊದಮೊದಲು ಕುತೂಹಲಕ್ಕೆಂದು ಪ್ರಾರಂಭವಾಗುವ ಈ ಚಾಳಿ, ಮುಂದೆ ಅಕ್ಷರಶಃ ಬಿಡಲಾಗದ ವ್ಯಸನವೇ ಆಗಿಬಿಡುತ್ತಿದೆ. ನಂಬಲೇಬೇಕಾದ ವಿಷಯವೆಂದರೆ, ವಾರಾಂತ್ಯದ ದಿನಗಳಲ್ಲಿ ಶೇ.80ರಷ್ಟು ಇಂಟರ್ನೆಟ್ ಟ್ರಾಫಿಕ್ ಇಂತಹ ಅಶ್ಲೀಲತೆಗೆ ಸಂಬಂಧಿಸಿಯೇ ಜಾಮ್ ಆಗುತ್ತದೆ. ನಾವು ನಮ್ಮ ಜೀವನವನ್ನು ಸುಗಮಗೊಳಿಸಲೆಂದು ಅವಲಂಬಿಸಿರುವ ಆಧುನಿಕ ತಂತ್ರಜ್ಞಾನ ಅನಾನುಕೂಲವನ್ನೇ ಸೃಷ್ಟಿಸತೊಡಗಿದೆ. ಅಶ್ಲೀಲ ವಿಡಿಯೋಗಳ ಮೂಲಕ ಈ ವಯೋಮಾನದ ಮಕ್ಕಳು ದಾರಿ ತಪ್ಪುತ್ತಿರುವುದಷ್ಟೇ ಅಲ್ಲದೆ, ಸಮಾಜದಲ್ಲಿ ಕ್ರಿಮಿನಲ್‌ಗಳಾಗಿ ಬೆಳೆದುಬಿಡಬಹುದಾದ ಆತಂಕವನ್ನೂ ಸೃಷ್ಟಿಸಿದೆ.

ಅಭಿವೃದ್ಧಿ ಹೊಂದಿದ ಪಾಶ್ಚಾತ್ಯ ದೇಶಗಳಲ್ಲಿ ಇಂತಹ ಚಿತ್ರಗಳ ವೀಕ್ಷಣೆ, ಅಪ್ರಾಪ್ತ ವಯಸ್ಕರ ದೈಹಿಕ ಸಂಪರ್ಕಗಳು ಅಪರಾಧವೆನಿಸಿಕೊಳ್ಳುವುದಿಲ್ಲ. ಆದರೆ, ಭಾರತದಂತಹ ಸಂಪ್ರದಾಯಸ್ಥ, ಮಡಿವಂತಿಕೆಯ ದೇಶದಲ್ಲಿ ಇದು ಸಹ್ಯವಲ್ಲ. ಅಷ್ಟು ಚಿಕ್ಕ ವಯಸ್ಸಿನ ಮಕ್ಕಳು ಇಂಥದೊಂದು ಗೀಳಿಗೆ ಅಂಟಿಕೊಳ್ಳುತ್ತಿದ್ದಾರೆಂಬುದನ್ನು ಅಪರಾಧವಾಗಿಂುೕ ನೋಡಲಾಗುತ್ತದೆ. ಇದನ್ನು ಕಾನೂನಿನ ಚೌಕಟ್ಟಿನಲ್ಲಿ ಅಪರಾಧ ಎಂದು ಪರಿಗಣಿಸಲಾಗದಿದ್ದರೂ, ಆ ವಯಸ್ಸಿನಲ್ಲಿ ಅಸಹಜ, ಅವೈಜ್ಞಾನಿಕ ಮತ್ತು ಅಸ್ವಾಭಾವಿಕವೆನಿಸಿಕೊಳ್ಳುತ್ತದೆ.

ಇಷ್ಟಕ್ಕೂ ನಾವು ಯೋಚಿಸಲೇಬೇಕಾಗಿರುವುದು, 13 ವರ್ಷದೊಳಗಿನ ಮಕ್ಕಳಿಗೆ ಅವರದೇ ಬಳಕೆಗೆಂದು ಮೊಬೈಲ್ ಕೊಡಿಸಬೇಕಾದ ಅಗತ್ಯ, ಅನಿವಾರ್ಯತೆಯಿದೆಯೇ? ಇಲ್ಲ, ಅವರ ಪಾಠಗಳ ಬಳಕೆಗೇನಾದರೂ ನಮ್ಮ ಮೊಬೈಲನ್ನೇ ಕೊಡುತ್ತೇವೆಂದಾದರೆ, ಮೊಬೈಲ್ ಬಳಕೆಯ ಬಗ್ಗೆ ಪಾಲಕರೂ ಅಗತ್ಯ ಜಾಗ್ರತೆ ವಹಿಸಲೇಬೇಕಲ್ಲ? ಇಂಥ ತಪ್ಪುಗಳು ಪಾಲಕರಿಂದಲೂ ಆಗಬಾರದಲ್ಲ? ಮತ್ತೇನು ಮಾಡಬಹುದು ಎಂಬ ಪ್ರಶ್ನೆ ಎದುರಾಗುತ್ತದೆ. ಇಂಥ ಸಂದರ್ಭಗಳಲ್ಲಿ ಹಿರಿಯರಾಗಿ, ಪಾಲಕರಾಗಿ, ನಮ್ಮ ಜವಾಬ್ದಾರಿಗಳನ್ನು ಅರಿಯಬೇಕಾಗಿರುವುದೂ ಅಷ್ಟೇ ಮುಖ್ಯ. ಎಲ್ಲವನ್ನೂ ಆಡಳಿತಾರೂಢ ಸರ್ಕಾರವೇ ಮಾಡುತ್ತದೆ ಎಂದು ಎದುರುನೋಡುವುದಕ್ಕಿಂತ, ನಮ್ಮ ಎಚ್ಚರಿಕೆಗಳನ್ನು ನಾವು ಪಾಲಿಸೋಣ.

ಮಕ್ಕಳು ನಿಮ್ಮದೇ ಮೊಬೈಲ್‌ಗಳನ್ನು ಬಳಸಬೇಕಾದ ಸಂದರ್ಭ ಬಂದಲ್ಲಿ ನಿಮ್ಮ ಎದುರಲ್ಲೇ ಬಳಸಿ ವಾಪಸ್ ನೀಡುವಂತೆ ನೋಡಿಕೊಳ್ಳಬಹುದು. ಅಶ್ಲೀಲ ವಿಡಿಯೋಗಳ ವೆಬ್‌ಸೈಟ್‌ಗಳ ಕಾರ್ಯವೈಖರಿ, ಅದರಿಂದಾಗುವ ತೊಂದರೆಗಳು, ಮೋಸದ ಜಾಲಕ್ಕೆ ಬಲಿಯಾಗಬಹುದಾದ ಸಾಧ್ಯತೆಗಳ ಬಗ್ಗೆಯೂ ತಿಳಿಹೇಳಿ. ಎಲ್ಲಕ್ಕಿಂತ ಮೊದಲು ಮಕ್ಕಳು ಹರೆಯಕ್ಕೆ ಕಾಲಿಡುತ್ತಿದ್ದಂತೆ, ಇಂಥ ಆಕರ್ಷಣೆಗಳ ಬಗ್ಗೆ ತಿಳಿಹೇಳಿ. ಶಿಕ್ಷಣದ ಬಗ್ಗೆ ಒತ್ತು ನೀಡಲು ಪ್ರೇರೇಪಿಸಿ. ಕೆಲಸ ಅಷ್ಟೇ ಸುಲಭವಾಗುತ್ತದೆ. ಎದುರಾಗಬಹುದಾದ ಅಡ್ಡಿಗಳೂ ನಿವಾರಣೆಯಾಗುತ್ತವೆ.

**– ಅಲೆಮಾರಿ.**

## ಅರುಣೋದಯ ಶಾಲೆಯಲ್ಲಿ ಗಾಂಧಿ, ಶಾಸ್ತ್ರೀ ಜಯಂತಿ



■ವಿಜಯಸಾಕ್ಷಿ ಸುದ್ದಿ, ಗದಗ

ಗದುಗಿನ ವಿಶೇಷ ಅಗತ್ಯವುಳ್ಳ ಮಕ್ಕಳ ಅರುಣೋದಯ ಶಾಲೆಯಲ್ಲಿ ಮಹಾತ್ಮ ಗಾಂಧಿ ಹಾಗೂ ಲಾಲ್ ಬಹದ್ದೂರ ಶಾಸ್ತ್ರೀ ಜಯಂತಿಯನ್ನು ಆಚರಿಸಲಾಯಿತು.

ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಮಾಜಿ ಸೈನಿಕ, ನ್ಯಾಯವಾದಿ ಸುಧೀರಸಿಂಹ ಘೋರ್ಪಡೆ ಮಾತನಾಡಿ, ಹಲವಾರು ಹೋರಾಟ, ತ್ಯಾಗ-ಬಲಿದಾನ ಹಾಗೂ ಅಹಿಂಸಾ ಮಾರ್ಗದ ಮೂಲಕ ಭಾರತವನ್ನು ಬ್ರಿಟೀಷರಿಂದ ಸ್ವತಂತ್ರ್ಯಗೊಳಿಸುವ ಮೂಲಕ ದೇಶಾಭಿಮಾನ ಮೂಡಿಸುವಲ್ಲಿ ಗಾಂಧಿ, ಶಾಸ್ತ್ರೀ ಅವರ ಪಾತ್ರವನ್ನು ಮರೆಯುವಂತಿಲ್ಲ.

ಅಪ್ಪಟ ದೇಶಪ್ರೇಮಿಗಳಾದ ಈ ಮಹನೀಯರ ಆದರ್ಶ ಗುಣಗಳನ್ನು ನಾವಿಂದು ಅಳವಡಿಸಿಕೊಳ್ಳಬೇಕಿದೆ. ಅವರ ತತ್ವ ಸಂದೇಶಗಳನ್ನು ಪರಿಪಾಲಿಸುವ ಮೂಲಕ ಅವರನ್ನು ಗೌರವಿಸಬೇಕಿದೆ ಎಂದರು.

ಈ ಸಂದರ್ಭದಲ್ಲಿ ಶಾಲಾ ಆಡಳಿತ ಮಂಡಳಿಯ ಉಪಾಧ್ಯಕ್ಷ ಲುಕ್ಕಣಸಾ ರಾಜೋಳಿ, ಕಾರ್ಯದರ್ಶಿ ಜಯರಾಜ ಮುಳಗುಂದ, ಕೋಶಾಧ್ಯಕ್ಷ ಜೀತೇಂದ್ರ ಶಹಾ, ಸದಸ್ಯರಾದ ಬಸವರಾಜ ನಾಗಲಾಪೂರ, ಡಾ.ಉಮೇಶ ಹಾದಿ, ವೆಂಕಟೇಶ, ಡಾ.ವಿಜಯಭಾಸ್ಕರ್ ರೆಡ್ಡಿ, ಡಾ.ಮಂಜಪ್ಪ, ಮುಖ್ಯೋಪಾಧ್ಯಾಯ ಮಲ್ಲಪ್ಪ ಹಕ್ಕಿ ಸೇರಿದಂತೆ ಶಾಲಾ ಸಿಬ್ಬಂದಿ ವರ್ಗ, ವಿದ್ಯಾರ್ಥಿಗಳಿದ್ದರು.

### 'ವಿಶ್ವ ಫಾರ್ಮಸಿಸ್ಟ್ ದಿನಾಚರಣೆ-2023'ರಲ್ಲಿ ವಿ ಪ್ರಭಾಕರ್ ಅಭಿಮತ

## ಫಾರ್ಮಸಿಸ್ಟ್‌ಗಳು ವೈದ್ಯಕೀಯ ವಿಜ್ಞಾನದ ಮುಖ್ಯ ಪಾತ್ರಧಾರಿಗಳು

■ವಿಜಯಸಾಕ್ಷಿ ಸುದ್ದಿ, ಗದಗ

ಮಾದರಿ ವೈದ್ಯಕೀಯ ವಿಜ್ಞಾನದಲ್ಲಿ ಫಾರ್ಮಸಿ ಅಧಿಕಾರಿಗಳ ಪಾತ್ರ ಗಮನಾರ್ಹವಾಗಿದೆ. ಮನುಕುಲದ ಆರೋಗ್ಯ ರಕ್ಷಣೆಯು ಹೊಸ ಹೊಸ ಅನ್ವೇಷಣೆಗಳ ಮುಖಾಂತರ ಜವಾಬ್ದಾರಿ ನಿರ್ವಹಿಸುವಲ್ಲಿನ ಅನೇಕ ವಿಭಾಗಗಳಿಂದ ಕ್ರೋಢೀಕೃತ ವ್ಯವಸ್ಥೆಯಾಗಿದೆ. ಫಾರ್ಮಸಿ ಅಧಿಕಾರಿಗಳು ವೈದ್ಯಕೀಯ ವಿಜ್ಞಾನವನ್ನು ರಸಾಯನಶಾಸ್ತ್ರದೊಂದಿಗೆ ಸಂಪರ್ಕಿಸುವ, ಅನ್ವೇಷಿಸುವ, ಔಷಧಗಳ ಪರಿಣಾಮವನ್ನು ದಾಖಲಿಸುವ ತಂತ್ರಜ್ಞರು ಮತ್ತು ಅನ್ವೇಷಕರಾಗಿ ವೈದ್ಯಕೀಯ ವಿಜ್ಞಾನದ ಮುಖ್ಯ ಪಾತ್ರಧಾರಿಗಳಾಗಿದ್ದಾರೆ ಎಂದು ಕರ್ನಾಟಕ ರಾಜ್ಯ ಸರ್ಕಾರಿ ಫಾರ್ಮಸಿ ಅಧಿಕಾರಿಗಳ ಸಂಘದ ರಾಜ್ಯಾಧ್ಯಕ್ಷ ವಿ ಪ್ರಭಾಕರ್ ನುಡಿದರು.

ಕರ್ನಾಟಕ ರಾಜ್ಯ ಸರ್ಕಾರಿ ಫಾರ್ಮಸಿ ಅಧಿಕಾರಿಗಳ ಸಂಘದ ಗದಗ ಜಿಲ್ಲಾ ಘಟಕ ಹಾಗೂ ಕರ್ನಾಟಕ ರಾಜ್ಯ ಔಷಧ ವಿಜ್ಞಾನ ಪರಿಷತ್ತು ಬೆಂಗಳೂರು ಇವರ ಸಹಭಾಗಿತ್ವದಲ್ಲಿ ಗದಗ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯಲ್ಲಿ ಆಯೋಜಿಸಲಾಗಿದ್ದ 'ವಿಶ್ವ ಫಾರ್ಮಸಿಸ್ಟ್ ದಿನಾಚರಣೆ-2023' ಹಾಗೂ ವೈಜ್ಞಾನಿಕ ಕಾರ್ಯಾಗಾರದಲ್ಲಿ ಮುಖ್ಯ ಅತಿಥಿಗಳಾಗಿ ಪಾಲ್ಗೊಂಡು ಅವರು ಮಾತನಾಡಿದರು.



ಕಾರ್ಯಕ್ರಮವನ್ನು ಉದ್ಘಾಟಿಸಿದ ಔಷಧ ನಿಯಂತ್ರಣಾ ಇಲಾಖೆಯ ಡಾ. ಭಾಸ್ಕರನ್ ಜೆ ಮಾತನಾಡಿ, ಔಷಧ ತಜ್ಞರಾಗಿ, ಫಾರ್ಮಸಿ ಅಧಿಕಾರಿಗಳು ಸಾಮಾನ್ಯ ಜನರ ಆರೋಗ್ಯ ಮತ್ತು ಸ್ವಾಸ್ಥ್ಯವನ್ನು ಕಾಪಾಡುವಲ್ಲಿ ಪರಿಣಾಮಕಾರಿ, ಸುರಕ್ಷಿತ ಮತ್ತು ಗುಣಮಟ್ಟದ ಔಷಧಗಳು ಮತ್ತು ಸೇವೆಗಳನ್ನು ಒದಗಿಸುವ ಜವಾಬ್ದಾರಿಯನ್ನು ಹೊಂದಿರುತ್ತಾರೆ ಎಂದರು.

ಕಾರ್ಯಕ್ರಮಕ್ಕೆ ವಿಷಯ ತಜ್ಞರಾಗಿ ಆಗಮಿಸಿದ್ದ ಬಳ್ಳಾರಿಯ ಪ್ರಾದೇಶಿಕ ಔಷಧ ಪರೀಕ್ಷಣಾ ಪ್ರಯೋಗಾಲಯದ ಡಾ. ಎನ್ ಶ್ರೀನಿವಾಸ ರೆಡ್ಡಿ ಮಾತನಾಡುತ್ತಾ, ಕೋವಿಡ್-19ನಂತಹ ವೈದ್ಯಕೀಯ ತುರ್ತು ಪರಿಸ್ಥಿತಿಯಲ್ಲಿ ಫಾರ್ಮಸಿಸ್ಟ್‌ಗಳ ಪಾತ್ರ ಶ್ಲಾಘನೀಯವಾಗಿದೆ ಎಂದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ರವಿಕುಮಾರ್ ಎಸ್.ಎಂ ವಹಿಸಿದ್ದರು. ಕಾರ್ಯಕ್ರಮದ ಭಾಗವಾಗಿ ಗಾನಯೋಗಿ ಪಂ. ಪುಟ್ಟರಾಜ ಗವಾಯಿಗಳರವರ, ಶ್ರೀ ವೀರೇಶ್ವರ ಪುಣ್ಯಾಶ್ರಮದ ಶ್ರೀಗಳಾದ ಪರಮಪೂಜ್ಯ ಶ್ರೀ ಕಲ್ಲಯ್ಯಜ್ಜನವರ ಆಶೀರ್ವಾದದೊಂದಿಗೆ ಆಶ್ರಮದ ಅಂಧ ಮಕ್ಕಳಿಗೆ ಸಂಗೀತ ವಾದ್ಯಗಳನ್ನು ವಿತರಿಸಲಾಯಿತು. ಮಲ್ಲಿಕಾರ್ಜುನ್ ಹಿರೇಮಠ ಕಾರ್ಯಕ್ರಮ ನಿರೂಪಿಸಿದರು. ಸುನಂದ ನಿರ್ವಹಿಸಿದರು.

## ಬಾಕ್ಸರ್ ಲೊವ್ಲಿನಾಗೆ ಬೆಳ್ಳಿ, ಕಂಚಿಗೆ ತೃಪ್ತಿಪಟ್ಟ ಪರ್ವೀನ್ ಹೂಡಾ



■ವಿಜಯಸಾಕ್ಷಿ ಸುದ್ದಿ, ಹ್ಯಾಂಗ್‌ಝೌ

ಚೀನಾದ ಹ್ಯಾಂಗ್‌ಝೌನಲ್ಲಿ ನಡೆಯುತ್ತಿರುವ 2023ರ ಏಷ್ಯನ್ ಗೇಮ್ಸ್‌ನಲ್ಲಿ ಭಾರತದ ಪದಕ ಬೇಟೆ ಮುಂದುವರೆದಿದ್ದು, ಟೋಕಿಯೊ ಒಲಿಂಪಿಕ್ ಪದಕ ವಿಜೇತೆ ಲೊವ್ಲಿನಾ ಬೊರ್ಗೊಹೈನ್ ಅವರು ಬುಧವಾರ ಬೆಳ್ಳಿ ಪದಕ ಗೆದ್ದಿದಾರೆ.


ಇಂದು ನಡೆದ ಬಾಕ್ಸಿಂಗ್ ಸ್ಪರ್ಧೆಯ ಮಹಿಳೆಯರ 75 ಕೆಜಿ ವಿಭಾಗದ ಫೈನಲ್ ನಲ್ಲಿ ಲೊವ್ಲಿನಾ ಬೊರ್ಗೊಹೈನ್ ಅವರು, ಹಾಲಿ ವಿಶ್ವ ಚಾಂಪಿಯನ್ ಮತ್ತು ಎರಡು ಬಾರಿ ಒಲಿಂಪಿಕ್ ಪದಕ ವಿಜೇತ ಲಿ ಕಿಯಾನ್ ವಿರುದ್ಧ ಸೋಲು ಅನುಭವಿಸುವುದರೊಂದಿಗೆ ಬೆಳ್ಳಿಗೆ ತೃಪ್ತಿಪಟ್ಟರು.

ಇನ್ನು ಬಾಕ್ಸಿಂಗ್ ಸ್ಪರ್ಧೆಯ ಮಹಿಳೆಯರ 57 ಕೆಜಿ ವಿಭಾಗದ ಸೆಮಿಫೈನಲ್‌ನಲ್ಲಿ ಪರ್ವೀನ್ ಹೂಡಾ ಅವರು ಎರಡು ಬಾರಿಯ ವಿಶ್ವ ಚಾಂಪಿಯನ್ ಚೈನೀಸ್ ತೈಪೆಯ ಲಿನ್ ಯು ಟಿಂಗ್ ವಿರುದ್ಧ ಸೋಲು ಅನುಭವಿಸುವುದರೊಂದಿಗೆ ಕಂಚಿಗೆ ತೃಪ್ತಿಪಟ್ಟರು.

ಈ ಮೂಲಕ ಭಾರತದ ಬಾಕ್ಸರ್‌ಗಳು ಒಂದು ಬೆಳ್ಳಿ ಮತ್ತು ನಾಲ್ಕು ಕಂಚು ಸೇರಿದಂತೆ ಐದು ಪದಕಗಳನ್ನು ಗೆದ್ದಿದ್ದಾರೆ. ಕಳೆದ ಆವೃತ್ತಿಯಲ್ಲಿ ಭಾರತ ಒಂದು ಚಿನ್ನ ಮತ್ತು ಒಂದು ಕಂಚು ಗೆದ್ದಿತ್ತು.

"ನಾನು ಅತ್ಯುತ್ತಮ ಪ್ರದರ್ಶನ ನೀಡಿದ್ದೇನೆ. ಆದರೂ ಚಿನ್ನವನ್ನು ತರಲು ಸಾಧ್ಯವಾಗಲಿಲ್ಲ. ನನ್ನ ಆಟದಿಂದ ನನಗೆ ಸಂತೋಷವಾಗಿದೆ. ನಾನು ಒಲಿಂಪಿಕ್ಸ್‌ನಲ್ಲಿ ಚಿನ್ನ ಗೆಲ್ಲಲು ಪ್ರಯತ್ನಿಸುತ್ತೇನೆ" ಎಂದು ಬೋರ್ಗೊಹೈನ್ ಅವರು ಪಂದ್ಯದ ನಂತರ ಹೇಳಿದ್ದಾರೆ.

## ಬಿಸಿಎ 1ನೇ ಸೆಮಿಸ್ಟರ್ ಪರೀಕ್ಷೆ ಫಲಿತಾಂಶ



■ವಿಜಯಸಾಕ್ಷಿ ಸುದ್ದಿ, ಗದಗ

ನಗರದ ಮನೋರಮಾ ಮಹಾವಿದ್ಯಾಲಯದ ಶೈಕ್ಷಣಿಕ ಸಾಲಿನ ಬಿಸಿಎ ಕೋರ್ಸಿನ ಮೊದಲನೇ ಸೆಮಿಸ್ಟರ್ ಪರೀಕ್ಷೆಯಲ್ಲಿ ಮಹಾವಿದ್ಯಾಲಯದ ವಿದ್ಯಾರ್ಥಿಗಳಾದ ವೀಣಾ ಚುಡಗುಂದ (642) ಪ್ರಥಮ ಸ್ಥಾನ, ಕೀರ್ತಿ ಹೊಸಮಠ (631) ದ್ವಿತೀಯ ಸ್ಥಾನ, ಧನರಾಜ ಭಾಂಡಗೆ (623) ತೃತೀಯ ಸ್ಥಾನ, ಸೃಷ್ಟಿ ಬಿನ್ನಾಳ (619) ನಾಲ್ಕನೇಯ ಸ್ಥಾನ, ತರುಣ ತುಮ್ಮರಮಟ್ಟಿ (603) ಐದನೇಯ ಸ್ಥಾನ ಪಡೆದಿದ್ದಾರೆ.

ಮಹಾವಿದ್ಯಾಲಯಕ್ಕೆ ಕೀರ್ತಿ ತಂದ ವಿದ್ಯಾರ್ಥಿಗಳ ಸಾಧನೆಯನ್ನು ಸಂಸ್ಥೆಯ ಚೇರಮನ್ ಎನ್.ಎಮ್ ಕುಡತರಕರ, ಪ್ರಾಚಾರ್ಯ ಬಿ.ಎಸ್ ಹಿರೇಮಠ, ಆಡಳಿತಾಧಿಕಾರಿ ಕಿಶೋರ ಮುದಗಲ್ಲ, ಸಂಸ್ಥೆಯ ನಿರ್ದೇಶಕರಾದ ಮಂಜುನಾಥ ಕುಡತರಕರ, ಸಂಜಯಕುಮಾರ ಕುಡತರಕರ, ಚೇತನ ಕುಡತರಕರ, ಸಹ ಸಂಯೋಜಕರಾದ ಪ್ರೊ. ಸವಿತಾ ಪೂಜಾರ ಹಾಗೂ ಸಿಬ್ಬಂದಿ ವರ್ಗದವರು ಅಭಿನಂದಿಸಿದ್ದಾರೆ.

## ಸಾರಿಗೆ ಸಂಸ್ಥೆಯ ಕಚೇರಿಯಲ್ಲಿ ಗಾಂಧಿ ಜಯಂತಿ



■ವಿಜಯಸಾಕ್ಷಿ ಸುದ್ದಿ, ಹುಬ್ಬಳ್ಳಿ

ವಾಯವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಯ ಕೇಂದ್ರ ಕಚೇರಿ, ಹುಬ್ಬಳ್ಳಿಯಲ್ಲಿ ಮಹಾತ್ಮ ಗಾಂಧಿಜಿಯವರ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿ, ದೀಪ ಬೆಳಗಿಸುವ ಮೂಲಕ ಜಯಂತಿಯನ್ನು ಆಚರಿಸಲಾಯಿತು.

ಮಹಾತ್ಮ ಗಾಂಧಿಜಿಯವರ ಕುರಿತು ಉಗ್ರಾಣ ಮತ್ತು ಖರೀದಿ ನಿಯಂತ್ರಕ ಆರ್.ಎ ಕಂದಗಲ್ ಮಾತನಾಡಿ, ಗಾಂಧಿಜಿಯವರು ಸತ್ಯ, ಅಹಿಂಸೆಯನ್ನು ತಮ್ಮ ಜೀವನದುದ್ದಕ್ಕೂ ಪ್ರತಿಪಾದಿಸಿ, ನನ್ನ ಜೀವನವೇ ನನ್ನ ಸಂದೇಶ ಎಂದು ನಿರೂಪಿಸಿದ್ದಾರೆ. ಅವರ ಜೀವನದ ಆದರ್ಶಗಳನ್ನು ನಮ್ಮ ಜೀವನದಲ್ಲಿ ಅಳವಡಿಕೊಳ್ಳುವದು ಬಹಳ ಅವಶ್ಯವಿದೆ ಎಂದು ನುಡಿದರು.

ಕಾರ್ಯಕ್ರಮದಲ್ಲಿ ಮುಖ್ಯ ಸಂಚಾರ ವ್ಯವಸ್ಥಾಪಕ ರಾಜೇಶ ಹುದ್ದಾರ, ಮುಖ್ಯ ಕಾರ್ಮಿಕ ಮತ್ತು ಕಲ್ಯಾಣಾಧಿಕಾರಿ ಶಶಿಧರ ಕುಂಬಾರ, ಮುಖ್ಯ ಕಾಮಗಾರಿ ಅಭಿಯಂತರ ದಿವಾಕರ ಯರಗೊಪ್ಪ, ಉಪ ಮುಖ್ಯ ಸಂಚಾರ ವ್ಯವಸ್ಥಾಪಕ ಎಚ್ ರಾಮನಗೌಡರ, ಮುಖ್ಯ ಭದ್ರತಾ ಮತ್ತು ಜಾಗೃತಾಧಿಕಾರಿ ದಶರಥ ಕೆಳಗೇರಿ, ಸಹಾಯಕ ಅಭಿಯಂತರ ಎಮ್.ಡಿ ಸುಂಕದ ಹಾಗೂ ಕೇಂದ್ರ ಕಚೇರಿಯ ಅಧಿಕಾರಿ ಮತ್ತು ಸಿಬ್ಬಂದಿವರ್ಗ ಉಪಸ್ಥಿತರಿದ್ದರು.

ವಿರುಪಾಕ್ಷ ಕಟ್ಟಿಮನಿ ಪ್ರಾಸ್ತಾವಿಕವಾಗಿ ಮಾತನಾಡಿ ಕಾರ್ಯಕ್ರಮವನ್ನು ನಿರೂಪಿಸಿ, ವಂದಿಸಿದರು.

### ಉಚಿತ ಕಣ್ಣಿನ ತಪಾಸಣೆ: ಶಸ್ತ್ರ ಚಿಕಿತ್ಸಾ ಶಿಬಿರಕ್ಕೆ ಆಯ್ಕೆ ಶಿಬಿರ

# ಮೃತರ ನೇತ್ರಗಳನ್ನು ದಾನ ಮಾಡಿ



■ವಿಜಯಸಾಕ್ಷಿ ಸುದ್ದಿ, ಗದಗ

ನಗರದ ಹಿಂದೂ ಮಹಾಗಣಪತಿ, ಲಯನ್ಸ್ ಕ್ಲಬ್ ಆಫ್ ಗದಗ ಬೆಟಗೇರಿ, ಜಯಪ್ರಿಯಾ ಆಸ್ಪತ್ರೆ ಹುಬ್ಬಳ್ಳಿ, ವಿಶ್ವ ಹಿಂದೂ ಪರಿಷತ್, ಭಜರಂಗದಳ, ಸುದರ್ಶನ ಚಕ್ರ ಯುವಕ ಮಂಡಳಿ, ಗದಗ ಜಿಲ್ಲಾ ಅಂಧತ್ವ ನಿವಾರಣಾ ಸಂಸ್ಥೆಯ ಆಶ್ರಯದಲ್ಲಿ ಉಚಿತ ಕಣ್ಣಿನ ತಪಾಸಣೆ ಹಾಗೂ ಶಸ್ತ್ರ ಚಿಕಿತ್ಸಾ ಶಿಬಿರಕ್ಕೆ ಸೋಮವಾರ ನಗರದ ಹಿಂದೂ ಮಹಾಗಣಪತಿ ಪ್ರತಿಷ್ಠಾಪನಾ ಆವರಣದಲ್ಲಿ ಆಯ್ಕೆ ನಡೆಯಿತು.

ಗದಗ-ಬೆಟಗೇರಿ ಲಯನ್ಸ್ ಕ್ಲಬ್‌ನ ಅಧ್ಯಕ್ಷ ರಮೇಶ ಶಿಗ್ಲಿ ಮಾತನಾಡಿ, ರಕ್ತದಾನ, ಸಾವಿನ ಬಳಿಕ ನೇತ್ರದಾನ, ದೇಹದಾನ ಮಾಡಲು ಅಗತ್ಯ ಕ್ರಮ ಜರುಗಿಸಬೇಕು. ಗದಗ ನಗರದಲ್ಲಿ 3 ತಿಂಗಳಲ್ಲಿ 8 ಜನ ನೇತ್ರದಾನ ಮಾಡಿದ್ದಾರೆ ಎಂದು ತಿಳಿಸಿದ, ನೇತ್ರದಾನ ಮಾಡಲು ಸಹಕಾರ ನೀಡಿದ ಆಯಾ ಕುಟುಂಬದವರನ್ನು ಬಣ್ಣಿಸಿದರು.

ವ್ಯಕ್ತಿಯ ಮರಣದ ನಂತರ ಯಾವುದೇ ಕಾರಣಕ್ಕೂ ಮೃತ ವ್ಯಕ್ತಿಯ ಕಣ್ಣುಗಳನ್ನು ಶವದೊಂದಿಗೆ ಮಣ್ಣು ಮಾಡದೇ ಅಥವಾ ಬೆಂಕಿಯಲ್ಲಿ ಸುಡದೇ ದಾನ ಮಾಡಬೇಕು. ವ್ಯಕ್ತಿ ಮರಣ ಹೊಂದಿದ ತಕ್ಷಣ ನಮ್ಮ ಸಂಘಟನೆಗಾಗಲಿ ಅಥವಾ ನೇತ್ರತಜ್ಞರಿಗಾಗಲಿ ಫೋನ್ ಮಾಡಿದರೆ ತಜ್ಞರು ಕಣ್ಣು ತೆಗೆದುಕೊಂಡು ಕಣ್ಣಿಲ್ಲದವರಿಗೆ ಅಳವಡಿಸುವ ಕಾರ್ಯ ಮಾಡುವರು ಎಂದು ರಮೇಶ ಶಿಗ್ಲಿ ತಿಳಿಸಿದರು.

ಕ್ಲಬ್‌ನ ಕಾಯದರ್ಶಿ ಪ್ರವೀಣ ವಾರಕರ, ಖಜಾಂಚಿ ರಾಜಣ್ಣ ಮಲ್ಲಾಡದ, ಕ್ಲಬ್‌ನ ಝೋನ್ ಚೇರ್ಮನ್ ದತ್ತು ಬೇವಿನಕಟ್ಟಿ, ಜೆ.ಡಿ ಉತ್ತರಕರ, ಜಿಲ್ಲಾ ಚೇರ್ಮನ್ ಅಶ್ವಥ ಸುಲಾಖೆ, ಡಾ. ವೀರೇಶ್ ಹಂಚಿನಾಳ, ಲೇಡೀಸ್ ವಿಂಗ್ ಅಧ್ಯಕ್ಷೆ ಸಾವಿತ್ರಿ ಶಿಗ್ಲಿ, ಹಿಂದೂ ಮಹಾಗಣಪತಿ ಸಮಿತಿಯ ಸುಧೀರ ಕಾಟೀಗರ, ರಾಘವೇಂದ್ರ ಹಬೀಬ, ಸಂತೋಷ ಮೇಲಗಿರಿ, ಮಾರುತಿ ದಹಿಂಡೆ, ಶಂಕರ ದಹಿಂಡೆ, ರವಿ ಮಾಳೇಕೊಪ್ಪಮಠ, ವಸಂತ ಹಬೀಬ, ವಿಶ್ವನಾಥ ಸಿರಿಗಣ್ಣವರ, ಸ್ವರೂಪ ಹುಬ್ಬಳ್ಳಿ, ಪದ್ಮಾನಂದ ಬೇವಿನಕಟ್ಟಿ, ಗಣೇಶ ಲದ್ವಾ, ಬಾಬು ಕಾಟಿಗರ ಇನ್ನಿತರರು ಉಪಸ್ಥಿತರಿದ್ದರು.

ಡಾ. ವೀರೇಶ ಹಂಚಿನಾಳ ಮೂವರು ವೃದ್ಧ ಮಹಿಳೆಯರಿಗೆ ವಾಕರ್‌ಗಳನ್ನು ದಾನ ಮಾಡಿದರು.

**ನೀವೂ ನಮ್ಮ ಜೊತೆ ಕೈಜೋಡಿಸಿ**

**'ವಿಜಯಸಾಕ್ಷಿ'**

ನಿಮ್ಮ ಮನೆಯ, ಮನದ ಪತ್ರಿಕೆ ಆಗಲೆಂದು ನಾವು ಬಯಸುತ್ತೇವೆ. ಇಲ್ಲಿ ನಿಮ್ಮ ಅಭಿಪ್ರಾಯ ಹಂಚಿಕೊಳ್ಳಲು ಮುಕ್ತ ಸ್ವಾಗತವಿದೆ.
ನೀವು ಪತ್ರಿಕೆಯ ಕುರಿತು ತಮ್ಮ ಸಲಹೆ, ಮೆಚ್ಚುಗೆ ನಮಗೆ ಬರೆದು ಕಳಿಸಿ..
ಲೇಖನ, ಸಣ್ಣ ಕತೆ, ಕವನ, ಪ್ರಬಂಧ, ಪ್ರವಾಸ ಅನುಭವ ಈ ಕುರಿತು ನೀವೂ ಬರೆಯಬಹುದು.
E-mail: vijayasakshidaily@gmail.com
ಮೊ : 9019256545

# ರೈತರಿಗೆ ಅನ್ಯಾಯವಾದರೆ ಸಹಿಸುವುದಿಲ್ಲ

▶▶ ಮೊದಲನೇ ಪುಟದಿಂದ

ವಿತರಿಸಲಾಗುವುದು ಎಂದು ಸಭೆಗೆ ಮಾಹಿತಿಯನ್ನು ನೀಡಿದರು. ಈರುಳ್ಳಿ, ಮೆಣಸಿನಕಾಯಿ ಬೆಳೆಗಳು ಒಟ್ಟು 22 ಸಾವಿರ ಹೆಕ್ಟೇರ್ ಪ್ರದೇಶದಲ್ಲಿ ಹಾನಿಗೊಳಗಾಗಿದ್ದು, ಅವುಗಳಿಗೂ ಸಹ ಪರಿಹಾರ ವಿತರಿಸಲಾಗುವುದೆಂದರು.

ಪಶು ವೈದ್ಯಾಧಿಕಾರಿ ಎಂ.ಕುರಹಟ್ಟಿ ಮಾತನಾಡಿ, ರೋಣ ತಾಲೂಕಿಗೆ ಸಂಬಂಧಿಸಿದಂತೆ ಹೊಳೆಆಲೂರ, ಗಜೇಂದ್ರಗಡ ತಾಲೂಕಿನಲ್ಲಿ ನಾಗೇಂದ್ರಗಡ ಗ್ರಾಮಗಳಲ್ಲಿ ಗೋಶಾಲೆ ಆರಂಭಿಸಲು ಕ್ರಮ ಕೈಗೊಂಡಿದ್ದು, 2024 ಜನೇವರಿ ತಿಂಗಳವರೆಗೆ ಎರಡು ತಾಲೂಕಿನಲ್ಲಿ ಮೇವಿನ ಕೊರತೆಯಾಗುವುದಿಲ್ಲ. ಮುಂಜಾಗೃತಾ ಕ್ರಮವಾಗಿ ಹಸಿರು ಮೇವು ಬೆಳೆಯಲು ರೈತರಿಗೆ ಬೀಜ ವಿತರಣೆ ಮಾಡುವ ಮೂಲಕ ಪ್ರೋತ್ಸಾಹಿಸಲಾಗುತ್ತಿದೆ ಎಂದು ಸಭೆಗೆ ವಿವರಿಸಿದರು.

ವಿವಿಧ ಇಲಾಖೆಗಳ ಜಿಲ್ಲಾಧಿಕಾರಿಗಳು ಸೇರಿದಂತೆ ತಾಲೂಕಿನ ಅಧಿಕಾರಿಗಳು ಸಭೆಯಲ್ಲಿ ಭಾಗವಹಿಸಿದ್ದರು.

# ಪರೀಕ್ಷಾ ಪೂರ್ವ ತರಬೇತಿಯ ಪ್ರವೇಶ ಪತ್ರ ಸೇವಾಸಿಂಧು ಪೋರ್ಟಲ್‌ನಲ್ಲಿ ಲಭ್ಯ

▶▶ ಮೊದಲನೇ ಪುಟದಿಂದ

ರಂದು ಡಾ. ಎ.ಪಿ.ಜೆ. ಅಬ್ದುಲ್ ಕಲಾಂ ವಸತಿ ಶಾಲೆ, ಜಿಲ್ಲಾ ಆಸ್ಪತ್ರೆ ಹಿಂದುಗಡೆ, ಮಲ್ಲಸಮುದ್ರ ಇಲ್ಲಿ ಪ್ರವೇಶ ಪರೀಕ್ಷೆಗೆ ಹಾಜರಾಗಬೇಕು.

ಹೆಚ್ಚಿನ ಮಾಹಿತಿಗಾಗಿ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ, ಮೌಲಾನಾ ಆಜಾದ ಭವನ, ಗದಗ ಜಿಲ್ಲಾ ನ್ಯಾಯಾಲಯದ ಎದುರುಗಡೆ, ಗದಗ ಕಚೇರಿ ವೇಳೆಯಲ್ಲಿ ಸಂಪರ್ಕಿಸಬಹುದಾಗಿದೆ ಎಂದು ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ಜಿಲ್ಲಾ ಅಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಇಂಧನ ಕೊರತೆ ನೀಗಿಸಲು ಪರಿಸರ ಕಾಳಜಿಯೊಂದೇ ದಾರಿ

▶▶ ಮೊದಲನೇ ಪುಟದಿಂದ

ಜಗತ್ತಿನಾದ್ಯಂತ ಸಾಕಷ್ಟು ಚರ್ಚೆಗಳು ನಡೆಯುತ್ತಿವೆ. ಪರಿಹಾರೋಪಾಯಗಳನ್ನು ಕಂಡುಹಿಡಿಯುವ ನಿಟ್ಟಿನಲ್ಲಿ ಜಗತ್ತಿನ ಎಲ್ಲ ರಾಷ್ಟ್ರಗಳು ಒಂದೆಡೆ ಸೇರಿ ಚಿಂತನ ನಡೆಸುತ್ತಿರುವುದು ಸ್ವಾಗತಾರ್ಹ. ಸಾಧ್ಯವಾದಷ್ಟು ಪ್ರಮಾಣದಲ್ಲಿ ಹಸಿರು ಇಂಧನ ಬಳಸುವ ನಿಟ್ಟಿನಲ್ಲಿ ಆಲೋಚನೆಗಳ ಅವಶ್ಯಕತೆ ಇದೆ ಎಂದರು.

ಸಾಂಪ್ರದಾಯಿಕ ಇಂಧನದ ಜೊತೆಗೆ ಪರ್ಯಾಯ ಇಂಧನ ಶಕ್ತಿಗಳಾದ ಸೌರಶಕ್ತಿ, ಗಾಳಿ ವಿದ್ಯುತ್, ಜೈವಿಕ ಇಂಧನ, ಸಣ್ಣ ಜಲವಿದ್ಯುತ್ ಮೂಲಕ ಇಂಧನಬಳಕೆಗೆ ಹಾದಿಯನ್ನು ಕಂಡಕೊಳ್ಳಬೇಕಾಗಿದೆ. ಈ ಸಂಗತಿಯನ್ನು ಪ್ರತಿಯೊಬ್ಬರೂ ಅರ್ಥೈಸಿಕೊಳ್ಳುವ ಅವಶ್ಯಕತೆ ಇದೆ ಎಂದರು.

ಸಮ್ಮೇಳನದಲ್ಲಿ ಲೋಕಸಭಾ ಅಧ್ಯಕ್ಷ ಓಂ ಬಿರ್ಲಾ ನೇತೃತ್ವದಲ್ಲಿ ದೇಶದ ವಿಧಾನಸಭಾ ಅಧ್ಯಕ್ಷರು, ಸಭಾಪತಿಗಳಾದ ಕರ್ನಾಟಕದ ವಿಧಾನಸಭಾಧ್ಯಕ್ಷ ಯು.ಟಿ ಖಾದರ, ಜಾರ್ಖಂಡ್ ಸಭಾಧ್ಯಕ್ಷ ರವೀಂದ್ರನಾಥ ಮಹತೋ, ಪಂಜಾಬ ವಿಧಾನಸಭಾಧ್ಯಕ್ಷ ಸರ್ದಾರ ಕುರ್ತಾರಸಿಂಗ್, ಉತ್ತರ ಪ್ರದೇಶ ವಿಧಾನಸಭಾಧ್ಯಕ್ಷ ಸತೀಶ ಮಹಾನ್, ಸಿಕ್ಕಿಂ ವಿಧಾನಸಭಾಧ್ಯಕ್ಷ ಅರುಣ ಉಪ್ರೇತಿ, ಕೇರಳ ವಿಧಾನಸಭಾಧ್ಯಕ್ಷ ಎ.ಎನ್ ಶಾಮಸೀರ್ ಮುಂತಾದವರು ಉಪಸ್ಥಿತರಿದ್ದರು ಎಂದು ಡಾ.ಬಸವರಾಜ ಧಾರವಾಡ ತಿಳಿಸಿದ್ದಾರೆ.

# ಸಾಂಸ್ಕೃತಿಕ ಪರಿಷತ್ ಸದೃಢವಾಗಲಿ



■ ವಿಜಯಸಾಕ್ಷಿ ಸುದ್ದಿ, ಗದಗ

ಅಖಿಲ ಕರ್ನಾಟಕ ಸಾಂಸ್ಕೃತಿಕ ಪರಿಷತ್ ಜಿಲ್ಲಾದ್ಯಂತ ಸಂಘಟಿತರಾಗಬೇಕು. ಅಂದಾಗ ಮಾತ್ರ ಸಂಘ ಸದೃಢವಾಗಿ ಬೆಳೆಯಲು ಸಾಧ್ಯವಾಗುತ್ತದೆ ಎಂದು ಪರಿಷತ್ ರಾಜ್ಯಾಧ್ಯಕ್ಷ ಮನೋಹರ್ ನಾಯಕ ಹೇಳಿದರು.

ಅವರು ನಗರದ ಬಣ್ಣದ ಮನೆಯ ಸಾಂಸ್ಕೃತಿಕ ಭವನದಲ್ಲಿ ಮಹಾತ್ಮಾ ಗಾಂಧಿ ಹಾಗೂ ಲಾಲ್ ಬಹದ್ದೂರ ಶಾಸ್ತ್ರಿಜಿಯವರ ಜಯಂತಿ ಅಂಗವಾಗಿ ಜಿಲ್ಲಾ ಘಟಕದ ಪದಾದಿಕಾರಿಗಳ ಸೇವಾ ದೀಕ್ಷಾ ಸಮಾರಂಭ ಉದ್ಘಾಟಿಸಿ ಮಾತನಾಡಿದರು.

ಕಳೆದ ಹಲವಾರು ವರ್ಷಗಳಿಂದ ಪರಿಷತ್ ಸಾಂಸ್ಕೃತಿಕ, ಶೈಕ್ಷಣಿಕ, ಸಾಮಾಜಿಕ, ಧಾರ್ಮಿಕ, ಸಾಹಿತ್ಯ, ಕಲೆ ಹೀಗೆ ಹಲವಾರು ಕ್ಷೇತ್ರಗಳಲ್ಲಿ ಅತ್ಯುತ್ತಮ ಸೇವೆ ಸಲ್ಲಿಸಿದ್ದು, ಮುಂಬರುವ ದಿನಮಾನದಲ್ಲಿ ಧಾರವಾಡ ನಗರದಲ್ಲಿ ಶೈಕ್ಷಣಿಕ ಸಮ್ಮೇಳನ ನಡೆಸಲಾಗುವುದು ಎಂದರು.

ಪರಿಷತ್ ಜಿಲ್ಲಾಧ್ಯಕ್ಷ ರತ್ನಾ ಬದಿ, ಗೀತಾ ಹಲಸೂರ, ಪಿ.ಆರ್ ಹಿರೇಮಠ, ನೀಲು ರಾಠೋಡ, ಎಂ.ಡಿ ಮಾದರ, ವಿಶ್ವನಾಥ ಬೇಂದ್ರೆ, ಶಾಂತಕುಮಾರ ಭಜಂತ್ರಿ, ಗವಿಶಿದ್ದಯ್ಯ ಹಿರೇಮಠ, ಎಂ.ಎಂ ನಿಂಬನಾಯ್ಕರ, ಮೋತಿಲಾಲ ಮಾಲಗಿಮನಿ, ಪದ್ಮಾ ಕಬಾಡೆ, ಎ.ವಿ ಪ್ರಭು ಇದ್ದರು.

ಶ್ರೀ ವೀರಭದ್ರೇಶ್ವರ ಜಯಂತ್ಯುತ್ಸವ ಸಮಾರಂಭದಲ್ಲಿ ಶ್ರೀ ರಂಭಾಪುರಿ ಜಗದ್ಗುರುಗಳು

# ಆಧ್ಯಾತ್ಮ ಸಂಪತ್ತು ಜೀವನ ವಿಕಾಸಕ್ಕೆ ಅಡಿಪಾಯ

■ ವಿಜಯಸಾಕ್ಷಿ ಸುದ್ದಿ, ಹಿರೇಕೆರೂರ



ಧಾರ್ಮಿಕ ಸಂಪ್ರದಾಯ, ಪರಂಪರೆ ಮತ್ತು ಆಚರಣೆಗಳು ಮನಸ್ಸಿನ ಶಾಂತಿ, ನೆಮ್ಮದಿಗೆ ಪ್ರೇರಕ ಶಕ್ತಿಯಾಗಿವೆ. ಆಧ್ಯಾತ್ಮ ಜ್ಞಾನದ ಅದ್ಭುತ ಸಂಪತ್ತು ಮಾನವ ಜೀವನದ ವಿಕಾಸಕ್ಕೆ ಅಡಿಪಾಯ ಎಂದು ಬಾಳೆಹೊನ್ನೂರು ಶ್ರೀ ರಂಭಾಪುರಿ ಡಾ.ವೀರಸೋಮೇಶ್ವರ ಜಗದ್ಗುರುಗಳು ಅಭಿಪ್ರಾಯಪಟ್ಟರು.

ಅವರು ಬುಧವಾರ ಇಲ್ಲಿನ ಹಂಸಭಾವಿ ಶ್ರೀ ಶಿವಯೋಗೀಶ್ವರ ಆಶ್ರಮದಲ್ಲಿ ಜರುಗಿದ ಶ್ರೀ ವೀರಭದ್ರೇಶ್ವರ ಜಯಂತ್ಯುತ್ಸವ ಬೃಹತ್ ಸಮಾರಂಭದ ಸಾನ್ನಿಧ್ಯ ವಹಿಸಿ ಆಶೀರ್ವಚನ ನೀಡುತ್ತಿದ್ದರು.

ವೀರಶೈವ ಧರ್ಮದಲ್ಲಿ ವೀರಭದ್ರಸ್ವಾಮಿಗೆ ಅಗ್ರಸ್ಥಾನವಿದೆ. ದುಷ್ಟರ ಸಂಹಾರ, ಶಿಷ್ಟರ ರಕ್ಷಣೆಗಾಗಿ ಪರಶಿವನ ಜಟಾಮಕುಟದಿಂದ ಅವತರಿಸಿದಾತನೇ ವೀರಭದ್ರಸ್ವಾಮಿ. ದಕ್ಷಬ್ರಹ್ಮನ ದರ್ಪವನ್ನು ನಾಶಗೊಳಿಸಿ ಶಿವಶಕ್ತಿಯನ್ನು ಬೆಳೆಸಿದ ಮಹಿಮಾಶೂರ. ಶ್ರೀ ರಂಭಾಪುರಿ ಪೀಠದ ಕ್ಷೇತ್ರನಾಥನಾಗಿ ಗೋತ್ರಪುರುಷನಾಗಿ ಪೂಜೆಗೊಳ್ಳುತ್ತಿದ್ದಾನೆ. ಆತನ ಶಕ್ತಿ ಎಲ್ಲೆಡೆಯೂ ತುಂಬಿದೆ. ಎಲ್ಲೆಡೆ ನೆಲೆಗೊಂಡರೂ ಆತನ ಮೂಲ ಶಕ್ತಿ ಕೇಂದ್ರ ಶ್ರೀ ರಂಭಾಪುರಿ ಪೀಠದಲ್ಲಿ ಪೂಜೆಗೊಳ್ಳುವ ಶ್ರೀ ವೀರಭದ್ರಸ್ವಾಮಿ ಎಂಬುದನ್ನು ಮರೆಯುವಂತಿಲ್ಲ ಎಂದರು.

ಗೋಲಗೇರಿ ವಿರಕ್ತಮಠ ಮತ್ತು ಶಿವಯೋಗೀಶ್ವರ ಆಶ್ರಮದ ಸಿದ್ಧಲಿಂಗ ಸ್ವಾಮಿಗಳು ಸಮಾರಂಭವನ್ನು ಉದ್ಘಾಟಿಸಿ ಮಾತನಾಡಿ, ಹಂಸಭಾವಿಯ ಇತಿಹಾಸದಲ್ಲಿ ಇದೊಂದು ಅವಿಸ್ಮರಣೀಯವಾದ ಸಮಾರಂಭ. ಸಕಲ ಶಿಷ್ಯ ಸದ್ಭಕ್ತರ ಸೇವಾ ಸಹಕಾರದಿಂದ ಅದ್ದೂರಿಯಾಗಿ ನಡೆದಿದೆ. ಶ್ರೀ ವೀರಭದ್ರಸ್ವಾಮಿ ಎಲ್ಲಿ ನೆಲೆಸಿರುವನೋ ಆ ಕ್ಷೇತ್ರ ಅತ್ಯಂತ ಪವಿತ್ರವಾದದ್ದು. ದುಷ್ಟ ಶಕ್ತಿಗಳನ್ನು ನಿರ್ನಾಮಗೊಳಿಸಿ ಶಿವಶಕ್ತಿ ಸಂಚಯವನ್ನು ಬೆಳೆಸಿದ ಕೀರ್ತಿ ವೀರಭದ್ರಸ್ವಾಮಿಗೆ ಸಲ್ಲುತ್ತದೆ. ಶ್ರೀ ರಂಭಾಪುರಿ ಜಗದ್ಗುರುಗಳವರ ಸಾನ್ನಿಧ್ಯದಲ್ಲಿ ಈ ಕಾರ್ಯಕ್ರಮ ಜರುಗಿದ್ದು ಮತ್ತಷ್ಟು ಸಂಭ್ರಮಕ್ಕೆ ಕಾರಣವಾಗಿದೆ ಎಂದರು.

ಹಿರೇಮಾಗಡಿ ಮುರುಘಾಮಠದ ಮುರುಘರಾಜೇಂದ್ರ ಸ್ವಾಮಿಗಳು 'ರಂಭಾಪುರಿ ಬೆಳಗು' ಮಾಸಿಕವನ್ನು ಬಿಡುಗಡೆ ಮಾಡಿದರು. ರಾಣೆಬೆನ್ನೂರು ಹಿರೇಮಠದ ಶಿವಯೋಗಿ ಶಿವಾಚಾರ್ಯ ಸ್ವಾಮಿಗಳು ಮಾತನಾಡಿ, ಶ್ರೀ ವೀರಭದ್ರಸ್ವಾಮಿಯ ಕ್ರಿಯಾಕರ್ತೃತ್ವ ಶಕ್ತಿಗೆ ಸಮಾನವಾದ ಶಕ್ತಿ ಇನ್ನೊಂದಿಲ್ಲ. ಬೆಳಕಿನ ಬೆಲೆ ಕತ್ತಲಲ್ಲಿ ತಿಳಿಯುತ್ತದೆ. ಸತ್ಯವಂತರ ಬೆಲೆ ತಿಳಿಯುವುದು ಅಂತ್ಯದಲ್ಲಿ ಎಂಬುದನ್ನು ಮರೆಯಲಾಗದು ಎಂದರು.

ಮಡ್ಲೂರು ಮುರುಘಾಮಠದ ಮುರುಘರಾಜೇಂದ್ರ ಸ್ವಾಮಿಗಳು ಮಾತನಾಡಿ, ಬದುಕಿನಲ್ಲಿ ಹೆಜ್ಜೆ ಗುರುತನ್ನು ಉಳಿಸುವುದು ನಡಿಗೆಯಿಂದಲ್ಲ, ನಡತೆಯಿಂದ ಎಂಬುದನ್ನು ನೆನಪಿಡಬೇಕಾಗುತ್ತದೆ ಎಂದರು.

> ಕಣ್ಣು ಚೆನ್ನಾಗಿದ್ದರೆ ಜಗತ್ತನ್ನು ನೋಡಬಹುದು. ನಾಲಿಗೆ–ನಡತೆಗಳು ಚೆನ್ನಾಗಿದ್ದರೆ ಜಗತ್ತೇ ನಮ್ಮನ್ನು ನೋಡುತ್ತದೆ. ಶ್ರೇಷ್ಠ ಚಿಂತನೆ ಸಾಮಾನ್ಯ ವ್ಯಕ್ತಿಯನ್ನು ಯೋಗ್ಯ ವ್ಯಕ್ತಿಯನ್ನಾಗಿ ಮಾಡುತ್ತದೆ. ಸಾತ್ವಿಕ ಶಕ್ತಿ ಬೆಳೆಯಲು ಅರಿವು, ಆಚರಣೆಗಳು ಬಲು ಮುಖ್ಯ. ನಂಬಿಕೆ ಮತ್ತು ಪ್ರಾರ್ಥನೆ ಕಣ್ಣಿಗೆ ಕಾಣದಿರಬಹುದು. ಆದರೆ ಅಸಾಧ್ಯವಾದುದನ್ನು ಸಾಧಿಸುವ ಶಕ್ತಿ ಎರಡಕ್ಕೂ ಇವೆ. ಹೃದಯದಲ್ಲಿ ಮಧುರತೆ ನೋಟದಲ್ಲಿ ಸೌಂದರ್ಯ, ಕೆಲಸದಲ್ಲಿ ಪ್ರಾಮಾಣಿಕತೆ ಬೆಳೆಸಿಕೊಂಡರೆ ಸುಂದರ ಸಮಾಜ ಕಟ್ಟಲು ಸಾಧ್ಯ.
>
> – ಡಾ.ವೀರಸೋಮೇಶ್ವರ ಜಗದ್ಗುರುಗಳು.
> ಶ್ರೀ ರಂಭಾಪುರಿ ಪೀಠ, ಬಾಳೆಹೊನ್ನೂರು.

ಲಿಂಗದಹಳ್ಳಿ ವೀರಭದ್ರ ಶಿವಾಚಾರ್ಯ ಸ್ವಾಮಿಗಳು ಶ್ರೀ ವೀರಭದ್ರಸ್ವಾಮಿಯ ಲೀಲೆಗಳ ಕುರಿತು ಮಾತನಾಡಿದರು. ಹಂಸಭಾವಿ ಬೇಡಜಂಗಮ ಕ್ಷೇಮಾಭಿವೃದ್ಧಿ ಟ್ರಸ್ಟಿನ ಅಧ್ಯಕ್ಷ ವೇ.ಷಣ್ಮುಖಯ್ಯ ಬಿ.ಮಳಿಮಠ ಅಧ್ಯಕ್ಷತೆ ವಹಿಸಿದ್ದರು. ಸಮಾರಂಭದಲ್ಲಿ ಡಾ.ಸಿದ್ಧಲಿಂಗಸ್ವಾಮಿ ಎಸ್.ಛತ್ರದಮಠ, ಮಲ್ಲಯ್ಯ ಹಿರೇಮಠ, ಶಿವಯೋಗಿ ಎಸ್.ಮಳಿಮಠ, ಮೃತ್ಯುಂಜಯ ಎಮ್. ಮಳಿಮಠ, ಚಂದ್ರಯ್ಯ ಹಳ್ಳೂರಮಠ, ಕರಬಸಯ್ಯ ಬಸರಿಹಳ್ಳಿಮಠ, ಮೃತ್ಯುಂಜಯ ಹಿರೇಮಠ, ಚನ್ನಬಸಯ್ಯ ಹಳ್ಳೂರಮಠ, ಶಿವಯೋಗಿ ಕೆರೂಡಿ, ಮೃತ್ಯುಂಜಯ ಬಾಸೂರು, ಮೋಹನಗೌಡ ಪಾಟೀಲ, ಮೃತ್ಯುಂಜಯ ಎಮ್. ಕೆಂಬಿ, ಮರಿಸ್ವಾಮಿ ಹಿರೇಮಠ ಪಾಲ್ಗೊಂಡು ಶ್ರೀ ರಂಭಾಪುರಿ ಜಗದ್ಗುರುಗಳಿಂದ ಗುರುರಕ್ಷೆ ಸ್ವೀಕರಿಸಿದರು.

ರೇವತಿ–ಎಸ್.ಕೆ ಚನ್ನವೀರಗೌಡ್ರ ಮತ್ತು ಶಶಿಕಲಾ–ಮೃತ್ಯುಂಜಯ ಉಜನಿಮಠ ದಂಪತಿಗಳಿಗೆ ಸೇವಾ ಸಮಿತಿಯಿಂದ ವಿಶೇಷ ಗೌರವ ಸಲ್ಲಿಸಲಾಯಿತು. ಚಪ್ಪರದಹಳ್ಳಿಮಠದ ಸ್ಫೂರ್ತಿ ಪ್ರಾರ್ಥನೆ ಸಲ್ಲಿಸಿದರು. ಜಂಗಮ ಸಮಾಜದ ಕಾರ್ಯದರ್ಶಿ ಡಾ.ಪ್ರಭುಸ್ವಾಮಿ ಹಾಲೇವಾಡಿಮಠ ಸ್ವಾಗತಿಸಿದರು. ಸವಣೂರಿನ ಡಾ. ಗುರುಪಾದಯ್ಯ ಸಾಲಿಮಠ ನಿರೂಪಿಸಿದರು.

# ಸನ್ಮಾರ್ಗ ಕಾಲೇಜಿಗೆ ಜಿಲ್ಲಾ ಮಟ್ಟದ ಫುಟ್‌ಬಾಲ್ ರೋಲಿಂಗ್ ಟ್ರೋಫಿ



■ ವಿಜಯಸಾಕ್ಷಿ ಸುದ್ದಿ, ಗದಗ

ಇಲ್ಲಿನ ಸ್ಟೂಡೆಂಟ್ ಎಜ್ಯುಕೇಶನ್ ಸೊಸೈಟಿಯ ಸನ್ಮಾರ್ಗ ಪದವಿಪೂರ್ವ ವಿಜ್ಞಾನ ಮತ್ತು ವಾಣಿಜ್ಯ ಮಹಾವಿದ್ಯಾಲಯದ ವಿದ್ಯಾರ್ಥಿಗಳು ಗದಗ ಜಿಲ್ಲಾ ಪದವಿಪೂರ್ವ ಶಿಕ್ಷಣ ಇಲಾಖೆ ಹಾಗೂ ಬಿಪಿನ್ ಚಿಕ್ಕಟ್ಟಿ ಪದವಿಪೂರ್ವ ಕಾಲೇಜ್ ಇವರ ಸಹಯೋಗದಲ್ಲಿ ಜರುಗಿದ 2023–24ನೇ ಸಾಲಿನ ಪದವಿಪೂರ್ವ ಕ್ರೀಡಾಕೂಟದ ಜಿಲ್ಲಾ ಮಟ್ಟದ ಗುಂಪು ಕ್ರೀಡಾಕೂಟಗಳಲ್ಲಿ ಸಾಧನೆಗೈದಿದ್ದು, ಬಾಲಕರ ಫುಟ್‌ಬಾಲ್ ಪಂದ್ಯಾವಳಿಯಲ್ಲಿ ಪ್ರಥಮ ಸ್ಥಾನ ಗಳಿಸಿ ರಾಜ್ಯ ಮಟ್ಟಕ್ಕೆ ಆಯ್ಕೆಯಾಗಿದ್ದಾರೆ.

ಸತತ 4ನೇ ಬಾರಿ ಜಿಲ್ಲಾ ಮಟ್ಟದ ಫುಟ್‌ಬಾಲ್ ರೋಲಿಂಗ್ ಟ್ರೋಫಿಯನ್ನು ತನ್ನದಾಗಿಸಿಕೊಂಡ ಕೀರ್ತಿ ಸನ್ಮಾರ್ಗ ಕಾಲೇಜಿಗೆ ಸಂದಿದೆ. ತಂಡದ ಕುಶಾಲ ಗದಗ, ಚನ್ನಬಸವ ರಾಮನಕೊಪ್ಪ, ಶಶಾಂಕ ಪಾಟೀಲ, ಮಂಜುನಥ ಹೂಗಾರ, ಪ್ರಜ್ವಲ್ ಚವ್ಹಾಣ, ಮಂಜುನಾಥ ಬಿ.ಸಿ, ಆದರ್ಶ ವೆರಣೇಕರ, ಹರ್ಷ ಹಿರೇಮಠ, ಪ್ರಣವ ಮುದಗಲ್, ಪ್ರವೀಣ ಬೆಳಗಟ್ಟಿ, ಇಮಾಮ್ ಬಾದಾಮಿ, ಪ್ರಥಮ್ ತಳವಾರ, ಚೇತನ ರಗೌಜಿ, ಅಭಿಷೇಕ ಹುಬ್ಬಳ್ಳಿ, ರಿಹಾನ್ ಅಹಮದ್ ಇವರೆಲ್ಲಾ ಜಿಲ್ಲಾ ಮಟ್ಟದಲ್ಲಿ ಅತ್ಯುತ್ತಮ ಪ್ರದರ್ಶನ ನೀಡಿ ಗೆಲುವು ಸಾಧಿಸಿದ್ದಾರೆ.

ವಿಜೇತ ಕ್ರೀಡಾಪಟುಗಳಿಗೆ ಸಂಸ್ಥೆಯ ಚೇರ್‌ಮನ್ ಪ್ರೊ. ರಾಜೇಶ್ ಕುಲಕರ್ಣಿ, ಪ್ರಾಚಾರ್ಯ ಪ್ರೊ. ಪ್ರೇಮಾನಂದ ರೋಣದ, ಆಡಳಿತ ಮಂಡಳಿಯ ಪದಾಧಿಕಾರಿಗಳಾದ ಪ್ರೊ. ರೋಹಿತ್ ಒಡೆಯರ್, ಪ್ರೊ. ಉಡುಪಿ ದೇಶಪಾಂಡೆ, ಪ್ರೊ. ಸೈಯದ್ ಮತೀನ್ ಮುಲ್ಲಾ, ಪ್ರೊ. ರೋಹಿತ್ ಒಡೆಯರ್, ಆಡಳಿತಾಧಿಕಾರಿ ಎಮ್.ಸಿ ಹಿರೇಮಠ, ಉಪನ್ಯಾಸಕರು, ಸಿಬ್ಬಂದಿಗಳು ಅಭಿನಂದಿಸಿ ಶುಭ ಕೋರಿದ್ದಾರೆ.

# ಫಲಾನುಭವಿ ಆಧಾರಿತ ಯೋಜನೆಗಳಿಗೆ ಅರ್ಜಿ ಸಲ್ಲಿಸಲು ಅವಧಿ ವಿಸ್ತರಣೆ

■ ವಿಜಯಸಾಕ್ಷಿ ಸುದ್ದಿ, ಧಾರವಾಡ

ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಇಲಾಖೆಯಲ್ಲಿ ಫಲಾನುಭವಿ ಆಧಾರಿತ ಯೋಜನೆಗಳಾದ ಪ್ರತಿಭಾವಂತ ಅಂಗವಿಕಲ ವಿದ್ಯಾರ್ಥಿಗಳಿಗೆ ಪ್ರೋತ್ಸಾಹ ಧನ, ಶಿಶುಪಾಲನಾ ಭತ್ಯೆ, ನಿರುದ್ಯೋಗ ಭತ್ಯೆ, ಆಧಾರ ಯೋಜನೆ, ಗ್ರಾಮೀಣ ಪುನರ್ವಸತಿ ಕಾರ್ಯಕರ್ತರಿಗೆ ಮರಣ ಪರಿಹಾರ ನಿಧಿ, ಸಾಧನೆ ಯೋಜನೆ, ಪ್ರತಿಭೆ ಯೋಜನೆ, ವೈದ್ಯಕೀಯ ಪರಿಹಾರ ನಿಧಿ ಯೋಜನೆಗಳು ಜಾರಿಯಲ್ಲಿವೆ.

ಈ ಯೋಜನೆಗಳಿಗೆ 2023–24ನೇ ಸಾಲಿಗೆ ವಿಕಲಚೇತನ ಫಲಾನುಭವಿಗಳು ಆನ್‌ಲೈನ್ ಸೇವಾಸಿಂಧು ವೆಬ್‌ಸೈಟ್ URL:https://Sevasindhu.karnataka.gov.in/ ಪೋರ್ಟಲ್‌ನಲ್ಲಿ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ವಿಕಲಚೇತನ ಫಲಾನುಭವಿಗಳು ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಿ, ಅದರ ಹಾರ್ಡ್‌ಕಾಫಿಗೆ ಅವಶ್ಯಕ ದಾಖಲಾತಿಗಳನ್ನು ಲಗತ್ತಿಸಿ ಸಂಬಂಧಪಟ್ಟ ತಾಲೂಕಾ ಪಂಚಾಯತನಲ್ಲಿ ಕಾರ್ಯನಿರ್ವಹಿಸುತ್ತಿರುವ ವಿವಿದೋದ್ದೇಶ ಪುನರ್ವಸತಿ ಕಾರ್ಯಕರ್ತರು (ಎಂ.ಆರ್.ಡಬ್ಲ್ಯೂ) ಗಳಿಗೆ ಸಲ್ಲಿಸಬೇಕು. ಮತ್ತು ಅರ್ಜಿ ಸಲ್ಲಿಸುವ ಅವಧಿಯನ್ನು ಅಕ್ಟೋಬರ್ 15 ರ ವರೆಗೆ ವಿಸ್ತರಿಸಲಾಗಿದೆ.

ಹೆಚ್ಚಿನ ಮಾಹಿತಿಗಾಗಿ ತಾಲೂಕಾ ಪಂಚಾಯತಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ವಿವಿದೋದ್ದೇಶ ಪುನರ್ವಸತಿ ಕಾರ್ಯಕರ್ತರು ಕಚೇರಿ ದೂರವಾಣಿ ಸಂಖ್ಯೆ:0836–2744474 ನ್ನು ಸಂಪರ್ಕಿಸಬಹುದೆಂದು ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಪತ್ರಿಕೆಗಳು ಸಮಾಜದ ಕನ್ನಡಿ

■ ವಿಜಯಸಾಕ್ಷಿ ಸುದ್ದಿ, ಮುಳಗುಂದ



ಸಮಾಜದ ಅಂಕು–ಡೊಂಕುಗಳನ್ನು ತಿದ್ದುವ ಕಾರ್ಯದಲ್ಲಿ ಪತ್ರಿಕೆಗಳು ಹಾಗೂ ಪರ್ತಕರ್ತರು ನಿರತರಾಗಿರುವುದು ಹೆಮ್ಮೆಯ ಸಂಗತಿ. ಪತ್ರಿಕೆಗಳು ಸಮಾಜದ ಕನ್ನಡಿ ಇದ್ದಂತೆ ಎಂದು ಶಿಕ್ಷಕಿ ಟಿ.ವೀಣಾ ಹೇಳಿದರು.

ಅವರು ಪಟ್ಟಣದ ಸರಕಾರಿ ಮಾದರಿ ಕನ್ನಡ ಗಂಡು ಮಕ್ಕಳ ಶಾಲೆಯಲ್ಲಿ ವಿಜಯ ಕರ್ನಾಟಕ ಪತ್ರಿಕೆ ರಜತ ಸಂಭ್ರಮ ಹಾಗೂ ಹಸಿರು ಕರ್ನಾಟಕ ಅಭಿಯಾನದಲ್ಲಿ ಸಸಿಗಳನ್ನು ನೆಟ್ಟು ಮಾತನಾಡಿ, ವಿಜಯ ಕರ್ನಾಟಕ ಪತ್ರಿಕೆ ಪ್ರಾರಂಭವಾಗಿ 25 ವಸಂತ ಕಂಡಿದ್ದು, ಪತ್ರಿಕೆಯು ಶಿಕ್ಷಣ, ಸಾಹಿತ್ಯ, ಕೃಷಿ, ವಿದ್ಯಾರ್ಥಿ ಮಿತ್ರ, ಬೋಧಿ ವೃಕ್ಷ ಹೀಗೆ ಹತ್ತು ಹಲವಾರು ವಿಷಯಗಳ ಮೂಲಕ ನಾಡಿನ ಜನರನ್ನು ತಲುಪುತ್ತಿದೆ ಎಂದರು.

ಕೆ.ಎಂ ಹೆರಕಲ್ಲ ಮಾತನಾಡಿ, ವಿಜಯ ಕರ್ನಾಕಟ ಪತ್ರಿಕೆ ನಾಡಿನ ಜನ, ನೆಲ, ಸಂಸ್ಕೃತಿ, ಶಿಕ್ಷಣ, ಕೃಷಿಗಾಗಿ ಹತ್ತು ಹಲವಾರು ಪುಟಗಳ ಮೂಲಕ ಹೆಸರು ಗಳಿಸಿದೆ ಎಂದರು.

ಶಾಲಾ ಪ್ರಧಾನ ಗುರು ಪಿ.ಬಿ ಕೆಂಚನಗೌಡರ, ಎಂ.ಎಂ ಮೇಗಲಮನಿ, ಎಚ್.ಆರ್ ಭಜಂತ್ರಿ, ಎಸ್.ಎಚ್ ಉಪ್ಪಾರ, ವಿ.ಎಂ ಕಂಠಿ, ಎಸ್.ಡಿ ಪಂಡಿತ, ಎಸ್.ವಿ ಹಿರೇಮಠ, ನಂದಾ ಮಟ್ಟಿ, ಶಭಾನಾ ಅಬ್ಬುನವರ, ಪವಿತ್ರಾ ಮಟ್ಟಿ, ಜ್ಯೋತಿ ಜಾಧವ, ಕುಸಮಾ ಬಗಾಡೆ ಸೇರಿದಂತೆ ಶಾಲಾ ಮಕ್ಕಳು ಇದ್ದರು.

# ಬಸವೇಶ್ವರ ಶಾಲೆಯಲ್ಲಿ ಗಾಂಧೀಜಿ, ಶಾಸ್ತ್ರೀಜಿ ಜಯಂತಿ ಆಚರಣೆ



■ ವಿಜಯಸಾಕ್ಷಿ ಸುದ್ದಿ, ನರೇಗಲ್ಲ

ಪಟ್ಟಣದ ಶ್ರೀ ಬಸವೇಶ್ವರ ಕನ್ನಡ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಸೋಮವಾರ ರಾಷ್ಟ್ರಪಿತ ಮಹಾತ್ಮ ಗಾಂಧೀಜಿ, ಲಾಲ್ ಬಹದ್ದೂರ್ ಶಾಸ್ತ್ರೀಜಿಯವರ ಜಯಂತಿಯನ್ನು ಆಚರಿಸಲಾಯಿತು.

ಮುಖ್ಯೋಪಾಧ್ಯಾಯೆ ಬಿ.ಜಿ ಶಿಸಿಯವರು ಮಾತನಾಡಿ, ಲಾಲ್ ಬಹದ್ದೂರ್ ಶಾಸ್ತ್ರೀಯವರು ಸ್ವಾತಂತ್ರ್ಯಕ್ಕಾಗಿ ಸಮಯೋಚಿತ ತ್ಯಾಗ ಹಾಗೂ ಗಾಂಧೀಜಿಯವರ ಅಹಿಂಸಾತ್ಮಕ ಚಳುವಳಿಗಳನ್ನು ನೆನಪಿಸಿ ಮಾತನಾಡಿದರು. ಮಹಾತ್ಮ ಗಾಂಧಿಯವರ ಅಹಿಂಸಾತ್ಮಕ ಸ್ವಾತಂತ್ರ್ಯ ಚಳವಳಿ, ಹಳ್ಳಿಗಳ ಅಭಿವೃದ್ಧಿ, ರಾಮರಾಜ್ಯದ ಕನಸುಗಳು ನಿಜವಾಗಿಯೂ ಮಾದರಿ, ಈ ನೆಲೆಯಲ್ಲಿ ಮಹಾತ್ಮಾ ಗಾಂಧಿಯವರು ಆದರ್ಶ ನಾಯಕರಾಗಿದ್ದಾರೆ ಎಂದರು. ಶಾಲಾ ಮಕ್ಕಳು ಮಹನೀಯರ ಕುರಿತು ಹಾಡು ಮತ್ತು ಭಾಷಣ ಮಾಡಿದರು. ಶಿಕ್ಷಕರಾದ ಎಸ್.ವಿ ಹಿರೇಮಠ, ವ್ಹಿ.ಪಿ ಗ್ರಾಮಪುರೋಹಿತ, ವಿ.ಎಸ್ ಜಾಧವ, ಎಸ್.ಎಚ್ ಮಾನ್ವಿ, ಎಸ್.ಕೆ ಕುಲಕರ್ಣಿ, ಎಮ್.ವಿ ಕಡೆತೋಟದ, ಕೆ.ಆಯ್ ಕೋಳಿವಾಡ, ಆಯ್.ಬಿ ಒಂಟೆಲಿ, ಎನ್.ಜೆ ಸಂಗನಾಳ, ಜೆ.ವಿ ಕೆರಿಯವರ, ಸಿಬ್ಬಂದಿ ಬಳಗದವರು, ಮಕ್ಕಳು ಇದ್ದರು.

ಎಸ್‌ಪಿ ಬಿ.ಎಸ್ ನೇಮಗೌಡ ಮಾರ್ಗದರ್ಶನದಲ್ಲಿ ಶಾಂತಿಯುತ ಮೆರವಣಿಗೆ

# ಸಾಂಗವಾಗಿ ನೆರವೇರಿದ ಗಣೇಶ ವಿಸರ್ಜನೆ



■ ವಿಜಯಸಾಕ್ಷಿ ಸುದ್ದಿ, ಲಕ್ಷ್ಮೇಶ್ವರ

ಪಟ್ಟಣದಲ್ಲಿ ಸೆ.28, 29ರಂದು ಸ್ಥಾಪನೆಗೊಂಡಿದ್ದ ಗಣೇಶ ಮೂರ್ತಿಗಳನ್ನು ಮಂಗಳವಾರ ಸಂಭ್ರಮದಿಂದ ಬೀಳ್ಕೊಡಲಾಯಿತು.

ಪಟ್ಟಣದ ಅಂಬೇಡ್ಕರ್ ನಗರದಲ್ಲಿ ಸ್ಥಾಪಿಸಲಾಗಿದ್ದ ಕಾಳಿಂಗ ಸರ್ಪದ ಮೇಲೆ ನರ್ತಿಸುತ್ತಿರುವ ಗಣೇಶ ಮೂರ್ತಿ ಮೆರವಣಿಗೆ ಮದ್ಯಾಹ್ನದ ವೇಳೆಗೆ ಪ್ರಾರಂಭವಾಗಿತ್ತು. ನಂತರ ಪ್ರಮುಖ ಬೀದಿಗಳಲ್ಲಿ ಸಾಗಿದ ವಿಸರ್ಜನಾ ಮೆರವಣಿಗೆಯಲ್ಲಿ ಪಾಲ್ಗೊಂಡಿದ್ದ ಸಾವಿರಾರು ಯುವಕರು ಡಿಜೆ ಸದ್ದಿಗೆ ನೃತ್ಯ ಮಾಡುತ್ತಾ ಯಾವುದೇ ಗಲಾಟೆ ಇಲ್ಲದಂತೆ ಶಾಂತಿಯುತವಾಗಿ ವಿಸರ್ಜನೆಯನ್ನು ಪೂರೈಸಿದ್ದು ಜನರ ಮೆಚ್ಚುಗೆ ಗಳಿಸಿತು.

ಚಳ್ಳಮರದ ಓಣಿಯ ಸನಾತನ ಹಿಂದೂ ಸಮಿತಿಯವರು ಸ್ಥಾಪಿಸಿದ್ದ 'ಲಕ್ಷ್ಮೇಶ್ವರದ ರಾಜಾ' ಎಂದು ಕರೆಯಲ್ಪಟ್ಟಿದ್ದ ಗಣೇಶನ ಮೂರ್ತಿಯನ್ನು ಮೆರವಣಿಗೆಯ ಮೂಲಕ ಸಾಗಿ ವಿಸರ್ಜಿಸಲಾಯಿತು. ಸಾವಿರಾರು ಯುವಕರು ಹಾಡಿಗೆ ತಕ್ಕಂತೆ ನೃತ್ಯ ಮಾಡುತ್ತಾ ಘೋಷಣೆಗಳನ್ನು ಕೂಗಿದರು.



ಎರಡೂ ಸಮಿತಿಯವರು ವಿಶೇಷ ಆಸಕ್ತಿಯಿಂದ ಯಾವುದೇ ಅಹಿತಕರ ಘಟನೆಗೆ ಅವಕಾಶ ನೀಡದಂತೆ ಸಾಕಷ್ಟು ಮುನ್ನೆಚ್ಚರಿಕೆ ಕ್ರಮಗಳನ್ನು ಕೈಗೊಂಡು, ಶಿಸ್ತಿನಿಂದ ಮೆರವಣಿಗೆ ನಡೆಸಿದರು.

ಕಳೆದ ಕೆಲವು ವರ್ಷಗಳ ಹಿಂದೆ ಗಣಪತಿ ವಿಸರ್ಜನೆ ಕಾಲಕ್ಕೆ ಗಲಾಟೆ ಸಂಭವಿಸಿದ್ದರಿಂದ, ವಿಸರ್ಜನಾ ಮೆರವಣಿಗೆಯಲ್ಲಿ ಸಾವಿರಾರು ಜನರು ಸೇರುವ ನಿರೀಕ್ಷೆಯಿಂದ ಯಾವುದೇ ಗೊಂದಲಕ್ಕೆ ಅವಕಾಶವಾಗದಂತೆ ಪೊಲೀಸ್ ಇಲಾಖೆಯೂ ಸಿದ್ಧತೆಗಳನ್ನು ಮಾಡಿಕೊಂಡಿತ್ತು. ವಿವಿಧ ಕಡೆಗಳಿಂದ ಪೊಲೀಸ್ ಸಿಬ್ಬಂದಿಗಳನ್ನು ಕರೆಸಲಾಗಿತ್ತು. ಎಸ್‌ಪಿ ಬಿ.ಎಸ್ ನೇಮಗೌಡ, ಡಿವಾಯ್‌ಎಸ್‌ಪಿ ಎಸ್.ಬಿ ಸಂಕದ ಸ್ಥಳದಲ್ಲಿ ಹಾಜರಿದ್ದು ಮಾರ್ಗದರ್ಶನ ನೀಡಿದರು. ಸಿಪಿಐ ನಾಗರಾಜ ಮಾಡಳ್ಳಿ ಮತ್ತು ಇತರೆ ಸಿಬ್ಬಂದಿಗಳು ಬಂದೋಬಸ್ತ್ ವ್ಯವಸ್ಥೆ ಕೈಗೊಂಡಿದ್ದರು.

# ಅ. 11ರಂದು ದೂರು, ಅಹವಾಲು ಸ್ವೀಕಾರ

■ ವಿಜಯಸಾಕ್ಷಿ ಸುದ್ದಿ, ಧಾರವಾಡ

ಕರ್ನಾಟಕ ಲೋಕಾಯುಕ್ತ ಪೊಲೀಸ್ ಧಾರವಾಡ ಕಚೇರಿಯ ಪೊಲೀಸ್ ಅಧಿಕಾರಿಗಳು ಅಕ್ಟೋಬರ್ 11, 2023 ರಂದು ಬೆಳಿಗ್ಗೆ 11 ರಿಂದ ಮಧ್ಯಾಹ್ನ 2 ಗಂಟೆಯವರೆಗೆ ಹುಬ್ಬಳ್ಳಿ–ಧಾರವಾಡ ಮಹಾನಗರ ಪಾಲಿಕೆಯ ವಲಯ ಕಚೇರಿ–12 ರ (ಕಲಾಭವನ) ಸಭಾಂಗಣದಲ್ಲಿ ಸಾರ್ವಜನಿಕರಿಂದ ದೂರು ಮತ್ತು ಅಹವಾಲುಗಳನ್ನು ಸ್ವೀಕರಿಸುವರು.

ಕರ್ನಾಟಕ ಲೋಕಾಯುಕ್ತ ಪೊಲೀಸ್ ಅಧೀಕ್ಷಕರು, ಪೊಲೀಸ್ ಉಪಾಧೀಕ್ಷಕರು ಹಾಗೂ ಪೊಲೀಸ್ ನಿರೀಕ್ಷಕರವರು ಜಿಲ್ಲೆಯ ಸಾರ್ವಜನಿಕರಿಂದ ದೂರು ಸ್ವೀಕಾರ ಮಾಡುವವರಿದ್ದು, ಯಾವುದೇ ಸರಕಾರಿ ಅಧಿಕಾರಿ, ನೌಕರರು ಸರ್ಕಾರಿ ಸೇವೆ ಒದಗಿಸುವಲ್ಲಿ ಲಂಚಕ್ಕೆ ಬೇಡಿಕೆ ಇಟ್ಟಲ್ಲಿ, ಅನಾವಶ್ಯಕ ವಿಳಂಬ ಮಾಡುತ್ತಿದ್ದಲ್ಲಿ, ಯಾವುದಾದರು ಸರ್ಕಾರಿ ಭೂಮಿಗಳ ಒತ್ತುವರಿಯಾಗಿದ್ದಲ್ಲಿ, ಕಾಮಗಾರಿಗಳಲ್ಲಿ ಅಕ್ರಮ ಅಥವಾ ಕಳಪೆ ಕಾರ್ಯ ನಡೆದಿದ್ದರ ಬಗ್ಗೆ ದೂರು ನೀಡಬಹುದೆಂದು ಕರ್ನಾಟಕ ಲೋಕಾಯುಕ್ತ ಪೊಲೀಸ್ ಅಧೀಕ್ಷಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.


**ಪುರಸಭೆ ಕಾರ್ಯಾಲಯ, ರೋಣ ಜಿ: ಗದಗ, ಕರ್ನಾಟಕ–582209**
ದೂರವಾಣಿ : 08381-267234 Email: itstaff_ulb_ron@yahoo.in
Website : www.ronatown.mrc.gov.in
ಕ್ರ.ಸಂ/ಪುಸರೋ/ಜಾ.ಮಂ/ವಹಿ/10/2023–24 ದಿನಾಂಕ : 08–09–2023

**ಸಾರ್ವಜನಿಕ ಪ್ರಕಟಣೆ**

**ಕರ್ನಾಟಕ ಕಾಯ್ದೆ 1965 ರ 39ನೇ ನಿಯಮ**
**(ಅಧಿಕಾರಿಗಳ ಮಾರ್ಗದರ್ಶನ ಹಾಗೂ ನಕಲು ಮಂಜೂರಾತಿ ಇತ್ಯಾದಿ)**

ಯಾವತ್ತು ಸಾರ್ವಜನಿಕರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ, ಈ ಕೆಳಗೆ ಕಾಣಿಸಿದ ಪುರಸಭೆ ಮಾಲ್ಕಿ ಆಸ್ತಿಯನ್ನು ಮಂಜೂರ ಮಾಡಲು ತೀರ್ಮಾನಿಸಿರುತ್ತದೆ. ಈ ಕುರಿತು ಯಾವುದೇ ತಕರಾರು ವ ಆಕ್ಷೇಪಣೆ ಇದ್ದಲ್ಲಿ 30 (ಮೂವತ್ತು) ದಿವಸಗಳಲ್ಲಿ ಲೇಖಿ ಮೂಲಕ ಸಲ್ಲಿಸಬೇಕು. ತಪ್ಪಿದಲ್ಲಿ ಯಾವುದೇ ಆಕ್ಷೇಪಣೆಗಳು ಇರುವುದಿಲ್ಲ. ಅಂತಾ ಸೂಕ್ತ ಕ್ರಮ ಜರುಗಿಸಲಾಗುವುದು ತಿಳಿಯಿರಿ.
(1) ನಾಗರಿಕ ಸೌಲಭ್ಯದಲ್ಲಿ ಕಾಯ್ದಿರಿಸಿದ ಜಾಗೆಯ ರಿ.ಸ.ನಂ.680/2ಬ/1 ಮು.ಕ.ನಂ. 3329/ಎ/2 ಕ್ಷೇತ್ರ 371.62 ಚ.ಮೀ ವಿಶ್ವ ಕಟ್ಟಡ & ಇತರೆ ನಿರ್ಮಾಣ ಕಾರ್ಮಿಕರ ಸಂಘ (ರಿ) ರೋಣ ಇವರಿಗೆ ಸಭೆ ಮತ್ತು ಸಮಾರಂಭ ಮಾಡಿಕೊಳ್ಳಲು ಕಟ್ಟಡ ಕುರಿತು.

ಸಹಿ/– ಮುಖ್ಯಾಧಿಕಾರಿಗಳು,
ಪುರಸಭೆ ರೋಣ

ವಾಸಾಸಂಇ/ಗದಗ/ಕೆಎಸ್‌ಎಂಸಿಎ/221/2023–24

# ಮಳೆ ನೀರು ಸಂಗ್ರಹಣೆ ಜಾಗೃತಿ ಕಾರ್ಯಕ್ರಮ



■ ವಿಜಯಸಾಕ್ಷಿ ಸುದ್ದಿ, ಗದಗ

ನೆಹರು ಯುವ ಕೇಂದ್ರ ಗದಗ ಮತ್ತು ಶ್ರೀಮತಿ ಎಂ.ಬಿ ಹುಯಿಲಗೋಳ ಶಿಕ್ಷಣ ಮಹಾವಿದ್ಯಾಲಯ ಇವರ ಸಂಯುಕ್ತ ಆಶ್ರಯದಲ್ಲಿ ಬಿ.ಎಡ್ ವಿದ್ಯಾರ್ಥಿಗಳಿಗೆ ಮಳೆ ನೀರು ಸಂಗ್ರಹಣೆಯ ಬಗ್ಗೆ ಜಾಗೃತಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಮಹಾವಿದ್ಯಾಲಯದ ಪ್ರಾಂಶುಪಾಲೆ ಡಾ.ಗಂಗೂಬಾಯಿ ಪವಾರ್ ಮಾತನಾಡಿ, ಈ ವರ್ಷದಲ್ಲಿ ಬರಗಾಲ ಆವರಿಸಿದ್ದು, ಜನತೆ ನೀರನ್ನು ಹಿತ-ಮಿತವಾಗಿ ಬಳಸಬೇಕು. ವಿಶೇಷವಾಗಿ ಮಳೆ ಬರುವ ಸಂದರ್ಭದಲ್ಲಿ ನೇರವಾಗಿ ಮಳೆ ನೀರನ್ನು ಸಂಗ್ರಹಿಸಿ ದಿನನಿತ್ಯದ ಚಟುವಟಿಕೆಗಳಿಗೆ ಬಳಸಬೇಕು. ಈ ಮೂಲಕ ಮಳೆ ನೀರನ್ನು ಸಂರಕ್ಷಿಸಬಹುದು ಎಂದು ವಿಧ್ಯಾರ್ಥಿಗಳಿಗೆ ಸಲಹೆ ನೀಡಿದರು.

ಮಳೆ ನೀರಿನ ಸಂರಕ್ಷಣೆಯ ಬಗ್ಗೆ ಪ್ರೊ. ವ್ಹಿ.ಪಿ ಪಾಟೀಲ್ ಉಪನ್ಯಾಸ ನೀಡಿದರು. ಕಾರ್ಯಕ್ರಮದಲ್ಲಿ ರವಿಕುಮಾರ್, ಎಚ್.ವಿರೇಂದ್ರಗೌಡ ಪಾಟೀಲ್ ಉಪಸ್ಥಿತರಿದ್ದರು. ಆಶ್ವಿನಿ ಜೋಶಿ ಸ್ವಾಗತಿಸಿದರು. ಪ್ರೊ. ಮಾರುತಿ ಮಡ್ಡಿ ನಿರೂಪಿಸಿದರು.

# ಜಾಣ್ಮೆ, ಕೌಶಲ್ಯಗಳನ್ನು ಅಭಿವೃದ್ಧಿಪಡಿಸಿಕೊಳ್ಳಿ: ಆರ್.ಎಸ್ ಬುರಡಿ



■ ವಿಜಯಸಾಕ್ಷಿ ಸುದ್ದಿ, ಗದಗ

ಯುವ ಶಕ್ತಿಯು ಜಾಣ್ಮೆ, ಕೌಶಲ್ಯಗಳನ್ನು ಅಭಿವೃದ್ಧಿಪಡಿಸಿಕೊಂಡು ರಚನಾತ್ಮಕ ಕಾರ್ಯಗಳನ್ನು ಮಾಡುತ್ತ, ಹಿರಿಯರ ಮಾರ್ಗದರ್ಶನದಲ್ಲಿ ಮುನ್ನಡೆಯಬೇಕೆಂದು ಗದಗ ಶಹರ ಕ್ಷೇತ್ರ ಶಿಕ್ಷಣಾಧಿಕಾರಿ ಆರ್.ಎಸ್ ಬುರಡಿ ಹೇಳಿದರು.

ಅವರು ರೋಟರಿ ಗದಗ ಸೆಂಟ್ರಲ್ ಕ್ಲಬ್ ಗದುಗಿನ ಮದರ್‌ಥೇರೆಸಾ ಪ್ಯಾರಾ ಮೆಡಿಕಲ್ ಕಾಲೇಜಿನಲ್ಲಿ ಏರ್ಪಡಿಸಿದ್ದ 'ಯುವ ಜನತೆಗೆ ಮಾರ್ಗದರ್ಶನ' ಕಾರ್ಯಕ್ರಮದಲ್ಲಿ ಅತಿಥಿಯಾಗಿ ಮಾತನಾಡಿದರು.

ಯುವ ಜನರು ದುಶ್ಚಟಗಳತ್ತ ಮುಖ ಮಾಡದೇ ಟಿ.ವ್ಹಿ, ಮೊಬೈಲ್‌ಗಳಿಂದ ದೂರವಿದ್ದು, ಕುಟುಂಬದೊಂದಿಗೆ ನಿಕಟತೆ ಹೊಂದಿ, ಜೀವನದಲ್ಲಿ ಉತ್ತಮ ಮೌಲ್ಯಗಳನ್ನು ಹೊಂದಬೇಕೆಂದರು.

ಕ್ಲಬ್‌ನ ಅಸಿಸ್ಟಂಟ್ ಗವರ್ನರ್ ರಾಜಣ್ಣ ಗುಡಿಮನಿ ಮಾತನಾಡಿ, ಬದುಕನ್ನು ಸುಂದರವಾಗಿ ರೂಪಿಸಿಕೊಳ್ಳಲು ಯುವ ಜನತೆ ಮೊದಲು ದೃಢ ಸಂಕಲ್ಪವನ್ನು ಮಾಡಬೇಕು. ನಿರುದ್ಯೋಗ ಸಮಸ್ಯೆಗೆ ಕೌಶಲ್ಯ ಅಭಿವೃದ್ಧಿಯಂತಹ ಮೌಲ್ಯಗಳನ್ನು ಹೊಂದಬೇಕೆಂದರು.

ಅಧ್ಯಕ್ಷತೆ ವಹಿಸಿದ್ದ ಕ್ಲಬ್ ಅಧ್ಯಕ್ಷ ವಿಜಯಕುಮಾರ ಹಿರೇಮಠ ಮಾತನಾಡಿ, ನಿರ್ದಿಷ್ಠ ಗುರಿಯೊಂದಿಗೆ ನಾವು ಮುನ್ನಡೆದಾಗ ಯಶಸ್ಸು ಸಿಗುತ್ತದೆ. ಇದಕ್ಕೆ ಹಿರಿಯರ ಮಾರ್ಗದರ್ಶನ ಅವಶ್ಯ ಎಂದರು.

ಇದೇ ಸಂದರ್ಭದಲ್ಲಿ ಗದಗ ಶಹರ ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಾರ್ಯಾಲಯಕ್ಕೆ ರೋಟರಿ ಗದಗ ಸೆಂಟ್ರಲ್ ಕ್ಲಬ್‌ನಿಂದ ಫ್ಯಾನ್‌ನ್ನು ಉಡುಗೋರೆಯಾಗಿ ನೀಡಲಾಯಿತು. ಎಂ.ಸಿ ಐಲಿ ಸ್ವಾಗತಿಸಿದರು, ವ್ಹಿ.ಕೆ ಗುರುಮಠ ಪ್ರಾಸ್ತಾವಿಕವಾಗಿ ಮಾತನಾಡಿದರು. ರಾಜಶೇಖರ ಉಮನಾಬಾದಿ, ಶ್ರೀಕಾಂತ ಲಕ್ಕುಂಡಿ ನಿರ್ವಹಿಸಿದರು. ಸಂದೀಪ ಕಾಂಬಳೆ ಪರಿಚಯಿಸಿದರು. ಶಶಿಧರ ದಿಂಡೂರ ನಿರೂಪಿಸಿದರು. ಕ್ಲಬ್ ಕಾರ್ಯದರ್ಶಿ ಸಂತೋಷ ತೋಟಗಂಟಿಮಠ ವಂದಿಸಿದರು.

### ಕಲಾಚೇತನ ಸಾಂಸ್ಕೃತಿಕ ಆಕಾಡೆಮಿಯ 26ನೇ ವಾರ್ಷಿಕೋತ್ಸವ

# ಅ. ೮ರಂದು ತೋಂಟದಾರ್ಯ ಕಲ್ಯಾಣಕೇಂದ್ರದಲ್ಲಿ 'ನಾದ-ಬೋಧ'







■ ವಿಜಯಸಾಕ್ಷಿ ಸುದ್ದಿ, ಗದಗ

ಪ್ರಧಾನಿ ಮೋದಿಯವರು ತಮ್ಮ ಮನ್ ಕೀ ಬಾತ್‌ನಲ್ಲಿ ಶ್ಲಾಘಿಸಿರುವ ನಗರದ ಕಲಾಚೇತನ ಸಾಂಸ್ಕೃತಿಕ ಆಕಾಡೆಮಿಯು 26ನೇ ವಾರ್ಷಿಕೋತ್ಸವ ಆಚರಿಸಿಕೊಳ್ಳುತ್ತಿದ್ದು, ಅದರ ಅಂಗವಾಗಿ ದಿ.08 ರಂದು ರವಿವಾರ ಸಂಜೆ 6 ಗಂಟೆಗೆ ನಗರದ ತೋಂಟದಾರ್ಯ ಕಲ್ಯಾಣಕೇಂದ್ರದಲ್ಲಿ 'ನಾದ-ಬೋಧ' ಕಾರ್ಯಕ್ರಮ ಏರ್ಪಡಿಸಲಾಗಿದೆ.

ಕಾರ್ಯಕ್ರಮವು ಉಪನ್ಯಾಸ, ಪ್ರಶಸ್ತಿ ಪ್ರದಾನ ಹಾಗೂ ನಾದ ಸಂಭ್ರಮಗಳನ್ನು ಒಳಗೊಂಡಿದ್ದು, ಖ್ಯಾತ ಚಲನಚಿತ್ರ ನಟರು ಹಾಗೂ ವಾಗ್ಮಿಗಳಾದ ಕೆ.ಸುಚೇಂದ್ರ ಪ್ರಸಾದ ಉಪನ್ಯಾಸ ನೀಡುವರು. ಖ್ಯಾತ ಸಿತಾರ್ ವಾದಕರಾದ ಉಸ್ತಾದ್ ಮೊಹಸಿನ್‌ಖಾನ್ ಹಾಗೂ ಶಿರಸಿಯ ಜೇನು ಕೃಷಿ ಪಂಡಿತರಾದ ಮಧುಕೇಶ್ವರ ಹೆಗಡೆ ಇವರಿಗೆ ಕಲಾಚೇತನ ಪ್ರಶಸ್ತಿ ನೀಡಿ ಗೌರವಿಸಲಾಗುವುದು. ಕಲಾಚೇತನದ ನಿರ್ದೇಶಕರು ಹಾಗೂ ಹಿರಿಯ ಸಾಹಿತಿಗಳಾದ ಚಂದ್ರಶೇಖರ ವಸ್ತ್ರದ ಆಶಯ ನುಡಿಗಳನ್ನಾಡುವರು.

ಉಸಿರು ಫೌಂಡೇಶನ್ ಸಂಸ್ಥಾಪಕರು ಹಾಗೂ ಸಮಾಜಸೇವಕರಾದ ಶರಣ್ ಪಾಟೀಲ ಉಪಸ್ಥಿತರಿರುವರು. ಸಿತಾರ್ ವಾದಕರಾದ ಉಸ್ತಾದ್ ಮೊಹಸಿನ್ ಖಾನ್ ಹಾಗೂ ತಬಲಾ ವಾದಕರಾದ ಉಸ್ತಾದ್ ನಿಸಾರ್‌ಅಹ್ಮದ್ ಅವರಿಂದ ನಾದ ಸಂಭ್ರಮ ಜರುಗುವುದು. ಕಾರಣ ಈ ಕಾರ್ಯಕ್ರಮಕ್ಕೆ ಕಲಾಚೇತನದ ಅಭಿಮಾನಿಗಳು, ಕಲಾಸಕ್ತರು ಹಾಜರಿರಲು ಸಂಸ್ಥೆಯ ಸಂಸ್ಥಾಪಕರಾದ ಡಾ.ಕಾವೆಂಶ್ರೀ ಪ್ರಕಟಣೆ ಮೂಲಕ ವಿನಂತಿಸಿದ್ದಾರೆ.

### ಐಎಂಎ ನೂತನ ಪದಾಧಿಕಾರಿಗಳ ಪದಗ್ರಹಣ ಕಾರ್ಯಕ್ರಮದಲ್ಲಿ ಡಾ.ಯೋಗಾನಂದ ರೆಡ್ಡಿ

# ಗದಗ ಐಎಂಎ ರಾಜ್ಯಕ್ಕೆ ಮಾದರಿ

■ ವಿಜಯಸಾಕ್ಷಿ ಸುದ್ದಿ, ಗದಗ

ಗದುಗಿನ ಭಾರತೀಯ ವೈದ್ಯಕೀಯ ಸಂಸ್ಥೆ (ಐಎಂಎ) ಸಂಘಟನೆ, ಸೇವೆ, ಕಾರ್ಯ ಚಟುವಟಿಕೆಗಳಿಂದಾಗಿ ರಾಜ್ಯದಲ್ಲಿಯೇ ಮಾದರಿಯಾಗಿದೆ ಎಂದು ರಾಜ್ಯ ಐಎಂಎ ನಿಕಟಪೂರ್ವ ಅಧ್ಯಕ್ಷರೂ, ಐಎಂಎಯ ಕೆ.ಎಸ್.ಎಸ್.ಎಸ್‌ನ ಚೇರಮನ್ ಡಾ.ವೈ.ಸಿ.ಯೋಗಾನಂದ ರೆಡ್ಡಿ ಹೇಳಿದರು.

ಅವರು ಮಂಗಳವಾರ ಗದಗ ಐಎಂಎ ಸಭಾಂಗಣದಲ್ಲಿ ನೂತನ ಪದಾಧಿಕಾರಿಗಳಿಗೆ ಪದಗ್ರಹಣ ಸಮಾರಂಭದ ಮುಖ್ಯ ಅತಿಥಿಗಳಾಗಿ ಪಾಲ್ಗೊಂಡು ಮಾತನಾಡಿದರು.

ಗದುಗಿನ ನಿಪುಣ ಮತ್ತು ಕ್ರಿಯಾಶೀಲ ವೈದ್ಯರ ತಂಡವು ಐಎಂಎ ಸಂಘಟನೆಯನ್ನು ಅತ್ಯಂತ ರಚನಾತ್ಮಕವಾಗಿ ಕಟ್ಟಿದ್ದಾರೆ. ವೈದ್ಯ ನಾಯಕರು ಮತ್ತು ಅವರ ಅನುಯಾಯಿಗಳಲ್ಲಿ ಪರಸ್ಪರ ಗೌರವ, ಹೊಂದಾಣಿಕೆ, ಸಹಕಾರ ಮನೋಭಾವನೆ ಇರುವುದರಿಂದಲೇ ಇದೆಲ್ಲವೂ ಸಾಧ್ಯವಾಗಿದೆ. ಕಲಿಕೆಯೊಂದಿಗೆ ನಾಯಕತ್ವದ ಗುಣಗಳನ್ನು ಅನುಯಾಯಿಗಳಲ್ಲಿ ರೂಢಿಸುವಲ್ಲಿ ಹಿರಿಯ ವೈದ್ಯರು ಮಾರ್ಗದರ್ಶನ ನೀಡುತ್ತಿರುವದು ವೃತ್ತಿ ಗೌರವವನ್ನು ಎತ್ತಿ ಹಿಡಿದಿರುವದರ ಸಂಕೇತವಾಗಿದೆ ಎಂದರು.




> ವೈದ್ಯ ಮತ್ತು ರೋಗಿಯ ಮಧ್ಯ ಅವಿನಾಭಾವ ಸಂಬಂಧವಿರಬೇಕು, ಕುಟುಂಬ ವೈದ್ಯ ಪರಂಪರೆಯನ್ನು ಯುವ ವೈದ್ಯರು ಮುಂದುವರೆಸಬೇಕು. ರೋಗಿಗೆ ಸಹಾನುಭೂತಿ ತೋರಿಸಬೇಕು, ಎಲ್ಲವನ್ನು ಔಷಧಗಳಿಂದಲೇ ಗುಣಪಡಿಸಲಾಗದು. ಆಪ್ತ ಸಮಾಲೋಚನೆ, ಮಾನಸಿಕ ಸ್ಥೈರ್ಯ, ಅಭಯಹಸ್ತದಿಂದಲೂ ರೋಗ ವಾಸಿ ಮಾಡಲು ಸಾಧ್ಯ ಇದನ್ನು ರೂಢಿಸಿಕೊಳ್ಳುವ ಮೂಲಕ ಜಿಲ್ಲೆ, ರಾಜ್ಯ, ರಾಷ್ಟ್ರಮಟ್ಟದಲ್ಲಿ ಹೆಸರು ಮಾಡುವ ರೀತಿಯ ಸೇವೆ ನಿಮ್ಮದಾಗಲಿ.
>
> **-ಡಾ.ಯೋಗಾನಂದ ರೆಡ್ಡಿ**, ಐಎಂಎಯ ಕೆ.ಎಸ್.ಎಸ್.ಎಸ್‌ನ ಚೇರಮನ್.

ತಂಡವನ್ನು ಕಟ್ಟಿಕೊಂಡು ಒಟ್ಟಾಗಿ ಕೆಲಸ ಮಾಡುವ, ಅನುಭವ ಹಂಚಿಕೆ ಮಾಡಿಕೊಳ್ಳುವ ಉದಾರ ಗುಣಗಳು ಇಲ್ಲಿಯ ವೈದ್ಯರುಗಳಲ್ಲಿ ಮೈಗೂಡಿ ಬಂದಿದೆ. ಈ ಕಾರಣದಿಂದಲೇ ರಾಜ್ಯ ಐ.ಎಂ.ಎಗೆ ಇದುವರೆಗೆ ಅಧ್ಯಕ್ಷರುಗಳಾಗಿ ಸೇವೆ ಸಲ್ಲಿಸಿದವರಲ್ಲಿ 7 ಜನ ವೈದ್ಯರು ಗದುಗಿನವರು ಎಂಬುದು ಹೆಮ್ಮೆ, ಅಭಿಮಾನದ ವಿಷಯವೆಂದರು.

ಗದಗ ಐ.ಎಂ.ಎ ನೂತನ ಅಧ್ಯಕ್ಷ ಡಾ.ಜಿ.ಎಸ್.ಪಲ್ಲೇದ, ಕಾರ್ಯದರ್ಶಿ ಡಾ.ಚಂದ್ರಶೇಖರ ಆರ್.ಬಳ್ಳಾರಿ, ಖಜಾಂಚಿ ಡಾ.ಪ್ರತೀಕ ಪಿ.ಖೋನಾ, ಮಹಿಳಾ ವಿಭಾಗದ ಅಧ್ಯಕ್ಷೆ ಡಾ.ಸೋನಿಯಾ ಎಸ್. ಕರೂರ, ಕಾರ್ಯದರ್ಶಿ ಡಾ.ರಾಧಿಕಾ ಸಿ.ಬಳ್ಳಾರಿ ಅವರಿಗೆ ಅಧಿಕಾರ ಹಸ್ತಾಂತರಿಸಿ ಪ್ರಮಾಣ ವಚನ ಬೋಧಿಸಿದ ರಾಜ್ಯ ಐಎಂಎ ಅಧ್ಯಕ್ಷ ಡಾ.ಶಿವಕುಮಾರ ಲಕ್ಕೋಳ ರಚನಾತ್ಮಕ ಕಾರ್ಯಚಟುವಟಿಕೆಗಳ ಮೂಲಕ ಕಾರ್ಯ ಮಾಡಿ ಎಂದರಲ್ಲದೆ ಈ ಹಿಂದಿನ ತಂಡದ ಪದಾಧಿಕಾರಿಗಳ ಕಾರ್ಯ ಚಟುವಟಿಕೆಗಳನ್ನು ಶ್ಲಾಘಿಸಿದರು.

ಗದಗ ಐ.ಎಂ.ಎ ನೂತನ ಅಧ್ಯಕ್ಷ ಡಾ.ಜಿ.ಎಸ್.ಪಲ್ಲೇದ ಅವರು ತಮ್ಮ ಅಧಿಕಾರದ ಅವಧಿಯಲ್ಲಿ ಹಮ್ಮಿಕೊಳ್ಳಲಿರುವ ಕಾರ್ಯಯೋಜನೆಗಳನ್ನು ವಿವರಿಸಿ ಹಿರಿಯ ವೈದ್ಯರುಗಳ ಸಹಕಾರ ಕೋರಿದರು.

ನಿಕಟಪೂರ್ವ ಪದಾಧಿಕಾರಿಗಳಾದ ಡಾ.ವ್ಹಿ.ಎಸ್.ಹೊಸಮಠ, ಡಾ.ಸಲೀಂ ಜಮಾದಾರ, ಡಾ.ಶೃತಿಭಾವಿ ಪಾಟೀಲ, ಡಾ.ಗಂಗಾ ಅಳ್ಳೊಳ್ಳಿ ತಮ್ಮ ಅಧಿಕಾರದ ಅವಧಿಯ ಕಾರ್ಯಯೋಜನೆಗಳ ಸ್ಮರಿಸಿಕೊಂಡರು.

ಡಾ.ಪ್ರತೀಕ ಖೋನಾ ಐಎಂಎ ಪ್ರಾರ್ಥನೆ ಹೇಳಿದರು, ಡಾ.ವ್ಹಿ.ಎಸ್. ಹೊಸಮಠ ಸ್ವಾಗತಿಸಿದರು, ಡಾ.ಸಲೀಂ ಜಮಾದಾರ ನಿರೂಪಿಸಿದರು. ಕೊನೆಗೆ ಕಾರ್ಯದರ್ಶಿ ಡಾ.ಚಂದ್ರಶೇಖರ ಬಳ್ಳಾರಿ ವಂದಿಸಿದರು. ಸಮಾರಂಭದಲ್ಲಿ ಐಎಂಎ ಹಿರಿಯ, ಕಿರಿಯ ವೈದ್ಯರುಗಳು ಉಪಸ್ಥಿತರಿದ್ದರು.

### ಜಿಲ್ಲಾ ಮಟ್ಟದ ಯೋಗಾಸನ ಸ್ಪರ್ಧೆ ಕಾರ್ಯಕ್ರಮದಲ್ಲಿ ಪ್ರೊ. ಎಸ್.ವಾಯ್ ಚಿಕ್ಕಟ್ಟಿ ಆಶಯ

# ಯೋಗಸಾನ ಕ್ರೀಡೆಗೆ ಹೆಚ್ಚಿನ ಪ್ರೋತ್ಸಾಹ ದೊರೆಯಲಿ




■ ವಿಜಯಸಾಕ್ಷಿ ಸುದ್ದಿ, ಗದಗ

ಕ್ರೀಡಾ ಕ್ಷೇತ್ರದಲ್ಲಿ ಇಂದು ಕ್ರೀಡೆಗಳಿಗೆ ಪ್ರೋತ್ಸಾಹ ದೊರೆಯುತ್ತಿರುವುದು ಸಂತೋಷದ ವಿಷಯ. ಇತ್ತೀಚೆಗೆ ಕ್ರೀಡೆಗಳಲ್ಲಿ ಯೋಗಾಸನ ಕ್ರೀಡೆಯೂ ಸೇರ್ಪಡೆಯಾಗಿದ್ದರೂ ಹೆಚ್ಚು ಪ್ರಚಲಿತದಲ್ಲಿಲ್ಲ. ಈ ನಿಟ್ಟಿನಲ್ಲಿ ಯೋಗಾಸನ ಕ್ರೀಡೆಗೆ ಹೆಚ್ಚಿನ ಪ್ರೋತ್ಸಾಹ ದೊರೆಯಬೇಕಾಗಿದೆ ಎಂದು ಪ್ರೊ. ಎಸ್.ವಾಯ್ ಚಿಕ್ಕಟ್ಟಿ ಅಭಿಪ್ರಾಯಪಟ್ಟರು.

ಪದವಿಪೂರ್ವ ಶಿಕ್ಷಣ ಇಲಾಖೆ ಗದಗ ಇವರು ಬಿಪಿನ್ ಚಿಕ್ಕಟ್ಟಿ ಪದವಿಪೂರ್ವ ಕಾಲೇಜಿನ ಸಹಯೋಗದಲ್ಲಿ ಪ.ಪೂ ಕಾಲೇಜು ವಿದ್ಯಾರ್ಥಿಗಳಿಗಾಗಿ ಆಯೋಜಿಸಿದ್ದ ಗದಗ ಜಿಲ್ಲಾ ಮಟ್ಟದ ಯೋಗಾಸನ ಸ್ಪರ್ಧೆಗಳ ಉದ್ಘಾಟನಾ ಸಮಾರಂಭದ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ನಿರ್ದಿಷ್ಟ ಸ್ಥಳಾವಕಾಶ, ಸಾಮಗ್ರಿಗಳು ಯೋಗಾಸನ ಕ್ರೀಡೆಗೆ ಅಗತ್ಯವಿಲ್ಲ. ಸಹಜ ಮತ್ತು ಸರಳವಾಗಿ ಹಾಗೂ ಕಡಿಮೆ ಖರ್ಚಿನಲ್ಲಿ ನಿಭಾಯಿಸಲು ಸಾಧ್ಯ. ಯೋಗಾಸನ ಕ್ರೀಡಾ ಸಾಧನೆಯಿಂದ ಮಕ್ಕಳು ದೈಹಿಕ ಹಾಗೂ ಮಾನಸಿಕವಾಗಿ ಸದೃಢಗೊಳ್ಳುವರು.

ಅದಕ್ಕಾಗಿ ಪಾಲಕರು, ಶಿಕ್ಷಕರು ಮಕ್ಕಳನ್ನು ಯೋಗಾಸನ ಕ್ರೀಡೆಯಲ್ಲಿ ಪಾಲ್ಗೊಳ್ಳಲು ಪ್ರೋತ್ಸಾಹಿಸಿ ಯೋಗಾಸನ ಕ್ರೀಡೆಯನ್ನು ಜನಪ್ರಿಯಗೊಳಿಸಬೇಕೆಂದರು.

ಮುಖ್ಯ ಅತಿಥಿಗಳಾಗಿ ಪಾಲ್ಗೊಂಡ ಬಿಪಿನ್ ಚಿಕ್ಕಟ್ಟಿ ಪ.ಪೂ ಕಾಲೇಜಿನ ಪ್ರಾಚಾರ್ಯ ವಿನಯ ಚಿಕ್ಕಟ್ಟಿ ಮಾತನಾಡಿ, ವಿದ್ಯಾರ್ಥಿಗಳು ಯೋಗಾಸನ ಕ್ರೀಡಾ ಸಾಧನೆ ಮಾಡಿ ಸೌಲಭ್ಯಗಳನ್ನು ಸದುಪಯೋಗಪಡಿಸಿಕೊಳ್ಳಬೇಕೆಂದು ಪ್ರೇರೇಪಿಸಿದರು.

ವೇದಿಕೆಯಲ್ಲಿ ಚಂದ್ರಕಾಂತ ತೋಟಿ, ಹಿರಿಯ ಕ್ರೀಡಾಪಟು ವಾಯ್.ಕೆ ಚೌಡಾಪೂರ, ಬಸವ ಯೋಗ ಕಾಲೇಜು ಪ್ರಾಚಾರ್ಯ ಕೆ.ಎಸ್. ಪಲ್ಲೇದ ಉಪಸ್ಥಿತರಿದ್ದರು. ಯೋಗಾಸನ ಕ್ರೀಡಾ ಪಟುಗಳಾದ ಶಿವಪ್ರಸಾದ ಹಿರೇಮಠ, ವಿಜಯ ಜಂಗಿನ, ನಮಿತಾ ಗುರಮ್ಮನವರ, ಅಕ್ಷತಾ ಇಂಗಳಳ್ಳಿ, ಸುಜಾತಾ ಕರ್ಜಗಿ ಇವರಿಂದ ಯೋಗಾಸನ ಪ್ರದರ್ಶನ ಮೂಲಕ ಕಾರ್ಯಕ್ರಮವನ್ನು ಉದ್ಘಾಟಿಸಲಾಯಿತು.

ದೈಹಿಕ ಶಿಕ್ಷಣ ಶಿಕ್ಷಕ ಪೂಜಾರ ಗುರುಗಳು ಸ್ವಾಗತಿಸಿದರು. ಉಪನ್ಯಾಸಕ ಬಿ.ವಿ ಜೋಶಿ ಕಾರ್ಯಕ್ರಮ ನಿರೂಪಿಸಿ, ವಂದಿಸಿದರು.



ಶಿರಹಟ್ಟಿಯಲ್ಲಿ ಬುಧವಾರ ಕರ್ನಾಟಕ ರಕ್ಷಣಾ ವೇದಿಕೆಯ ತಾಲೂಕಾ ಘಟಕದ ವತಿಯಿಂದ ಕಾವೇರಿ ಜಲ ವಿವಾದಕ್ಕೆ ಸಂಬಂಧಿಸಿದಂತೆ ಮಧ್ಯಪ್ರವೇಶಿಸಬೇಕೆಂದು ಒತ್ತಾಯಿಸಿ ಪ್ರಧಾನಿ ನರೇಂದ್ರ ಮೋದಿ ಅವರಿಗೆ ರಕ್ತದಲ್ಲಿ ಪತ್ರ ಬರೆಯುವ ಆಂದೋಲನ ಕೈಗೊಂಡರು. ತಾಲೂಕಾಧ್ಯಕ್ಷ ಬಸವರಾಜ ವಡವಿ, ದೇವೆಂದ್ರ ಸಿಂಧೆ, ಇಮ್ತಿಯಾಜ ಪಟವೇಗಾರ, ನೂರಅಹ್ಮದ ಮುಳಗುಂದ, ಅನ್ವರ ಬರದ್ವಾಡ, ನೂರಶಾ ಮಕಾಂದಾರ ಉಪಸ್ಥಿತರಿದ್ದರು.

# ಉಜ್ವಲ ಗ್ರಾಹಕರ ಎಲ್‌ಪಿಜಿ ಸಬ್ಸಿಡಿ ಮೊತ್ತ 200 ರೂ.ನಿಂದ 300 ರೂ.ಗೆ ಹೆಚ್ಚಿಸಿದ ಕೇಂದ್ರ

■ ವಿಜಯಸಾಕ್ಷಿ ಸುದ್ದಿ, ನವದೆಹಲಿ

ಪ್ರಧಾನ ಮಂತ್ರಿ ಉಜ್ವಲ ಯೋಜನೆಯ ಫಲಾನುಭವಿಗಳಿಗೆ ಪ್ರತಿ ಎಲ್‌ಪಿಜಿ ಸಿಲಿಂಡರ್‌ಗೆ ನೀಡಲಾಗುತ್ತಿದ್ದ ಸಬ್ಸಿಡಿ ಮೊತ್ತವನ್ನು 200 ರೂ.ನಿಂದ 300 ರೂ.ಗೆ ಸರ್ಕಾರ ಹೆಚ್ಚಿಸಿದೆ ಎಂದು ಕೇಂದ್ರ ಸಚಿವ ಅನುರಾಗ್ ಠಾಕೂರ್ ಬುಧವಾರ ತಿಳಿಸಿದ್ದಾರೆ.

ಕೇಂದ್ರ ಸಚಿವ ಸಂಪುಟ ಸಭೆಯಲ್ಲಿ ಈ ನಿರ್ಧಾರ ತೆಗೆದುಕೊಳ್ಳಲಾಗಿದ್ದು, ಉಜ್ವಲ ಯೋಜನೆಯ ಫಲಾನುಭವಿಗಳು ಪ್ರಸ್ತುತ 14.2 ಕೆಜಿ ಸಿಲಿಂಡರ್‌ಗೆ 703 ರೂ.ಗಳನ್ನು ಪಾವತಿಸುತ್ತಿದ್ದಾರೆ. ಇದರ ಮಾರುಕಟ್ಟೆ ಬೆಲೆ 903 ರೂ. ಇದ್ದು, ಈಗ ಅದನ್ನು ಈಗ 603 ರೂ. ಇಳಿಸಲಾಗಿದೆ ಎಂದು ಠಾಕೂರ್ ಹೇಳಿದ್ದಾರೆ. ಕೇಂದ್ರ ಸರ್ಕಾರ ಈ ಹಿಂದೆ ಪಿಎಂ ಉಜ್ವಲ ಯೋಜನೆ ಹೊಂದಿರುವವರಿಗೆ 200 ರೂ. ಸಬ್ಸಿಡಿ ನೀಡಿತ್ತು. ಈಗ ಮತ್ತೆ 100 ರೂ ಸಬ್ಸಿಡಿ ಒದಗಿಸುತ್ತಿದೆ. ಅಲ್ಲಿಗೆ ಈ ಯೋಜನೆಯ ಫಲಾನುಭವಿಗಳಿಗೆ ಒಟ್ಟು 300 ರೂ. ಸಬ್ಸಿಡಿ ಸಿಗುತ್ತದೆ. ಇದರೊಂದಿಗೆ 14.2 ಕಿಲೋ ಎಲ್‌ಪಿಜಿ ಸಿಲಿಂಡರ್ ಅನ್ನು ಪಿಎಂ ಉಜ್ವಲ ಯೋಜನೆಯ ಫಲಾನುಭವಿಗಳು ಬೆಂಗಳೂರಿನಲ್ಲಿ 605.50 ರೂಪಾಯಿಗೆ ಪಡೆಯಬಹುದು.



# ಹಿರಿಯ ನಾಗರಿಕರ ಕ್ರೀಡಾಕೂಟದಲ್ಲಿ ಶಿದ್ರಾಮಯ್ಯ ಕಾಶಿಮಠರಿಗೆ ಪ್ರಶಸ್ತಿ



■ ವಿಜಯಸಾಕ್ಷಿ ಸುದ್ದಿ, ಗದಗ

ವಿಶ್ವ ಹಿರಿಯ ನಾಗರಿಕರ ದಿನಾಚರಣೆಯ ನಿಮಿತ್ತ ನಡೆದ ಕ್ರೀಡಾ ಮತ್ತು ಸಾಂಸ್ಕೃತಿಕ ಸ್ಪರ್ಧೆಯಲ್ಲಿ 84 ವಯೋಮಾನದ ಚಿಕ್ಕಹಂದಿಗೋಳದ ಸಿದ್ರಾಮಯ್ಯ ಬಸಯ್ಯ ಕಾಶಿಮಠ ಇವರು ಏಕಪಾತ್ರಾಭಿನಯ ಮತ್ತು ಗಾಯನ ಸ್ಪರ್ಧೆಯಲ್ಲಿ (ರೈತರ ಹಂತಿಪದ) ಪ್ರಥಮ ಸ್ಥಾನ ಗಳಿಸಿದ್ದು, ಇತ್ತೀಚೆಗೆ ಗದಗ ಜಿಲ್ಲಾ ಪಂಚಾಯಿತಿ ಸಭಾಂಗಣದಲ್ಲಿ ಪ್ರಶಸ್ತಿ ನೀಡಿ ಗೌರವಿಸಲಾಯಿತು.

ಇವರು ಸತತ ನಾಲ್ಕನೇ ವರ್ಷವೂ ಈ ಪ್ರಶಸ್ತಿಗೆ ಭಾಜನರಾಗಿರುವುದು ವಿಶೇಷವಾಗಿದೆ. ಈ ಸಮಾರಂಭದಲ್ಲಿ ಗದಗ ಜಿಲ್ಲಾ ಉಸ್ತುವಾರಿ ಸಚಿವರು ಹಾಗೂ ಕಾನೂನು ಪ್ರವಾಸೋದ್ಯಮ ಸಚಿವರಾದ ಡಾ. ಎಚ್.ಕೆ ಪಾಟೀಲ, ಜಿಲ್ಲಾಧಿಕಾರಿ ವೈಶಾಲಿ ಎಂ.ಎಲ್, ಹಿರಿಯ ನಾಗರಿಕರ ಸಬಲೀಕರಣ ಕಲ್ಯಾಣಾಧಿಕಾರಿ ಕೆ.ಮಾಹಾಂತೇಶ, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಉಪನಿರ್ದೇಶಕ ಪಿ.ವಾಯ್ ಶೆಟ್ಟೆಪ್ಪನವರ ಮೊದಲಾದವರು ಹಾಜರಿದ್ದರು. ಇವರಿಗೆ ಗ್ರಾ.ಪಂ ಅಧ್ಯಕ್ಷರು, ಸದಸ್ಯರು, ಗ್ರಾಮಸ್ಥರು ಹಾಗೂ ಕಲಾವಿದರು ಶುಭಹಾರೈಸಿದ್ದಾರೆ.

### ಕಸಾಪ 'ಮಾಸದ ಮಾತು' ಕಾರ್ಯಕ್ರಮದಲ್ಲಿ ಪ್ರೊ. ಸಿ.ಡಿ ಪಾಟೀಲ ಅಭಿಮತ

# ಸಮಾಜದ ಮೌಢ್ಯ ನಿವಾರಣೆಗೆ ವಿಜ್ಞಾನ ಸಾಹಿತ್ಯ ಅಗತ್ಯ

■ ವಿಜಯಸಾಕ್ಷಿ ಸುದ್ದಿ, ಗದಗ

ಬದುಕಿನ ಎಲ್ಲ ಸ್ತರದಲ್ಲೂ ವಿಜ್ಞಾನ ಹಾಸುಹೊಕ್ಕಾಗಿದೆ. ವಿಜ್ಞಾನ ಬಿಟ್ಟು ಜೀವನವನ್ನು ನಡೆಸಲು ಸಾಧ್ಯವಿಲ್ಲ. ಪ್ರತಿ ಸಂಗತಿಯ ಹಿಂದಿರುವ ವೈಜ್ಞಾನಿಕ ಸತ್ಯವನ್ನು ಅರಿತು, ಆಚರಿಸಿದರೆ ಸಮಾಜ ಸ್ವಾಸ್ಥ್ಯದಿಂದ ಕೂಡಿರಲು ಸಾಧ್ಯವಾಗುತ್ತದೆ. ವಿಜ್ಞಾನದ ಆವಿಷ್ಕಾರಗಳನ್ನು ಮನುಕುಲದ ಒಳಿತಿಗಾಗಿ ಬಳಸಿಕೊಂಡಾಗ ಮಾತ್ರ ಮನುಷ್ಯ ನೆಮ್ಮದಿಯಿಂದ ಬದುಕಲು ಸಾಧ್ಯ ಎಂದು ವಿಜ್ಞಾನ ಲೇಖಕ ಪ್ರೊ. ಸಿ.ಡಿ ಪಾಟೀಲ ಹೇಳಿದರು.

ಅವರು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನಿಂದ ತೋಂಟದ ಸಿದ್ಧಲಿಂಗಶ್ರೀಗಳ ಕನ್ನಡ ಭವನದಲ್ಲಿ ಜರುಗಿದ 'ಮಾಸದ ಮಾತು' ಕಾರ್ಯಕ್ರಮದಲ್ಲಿ ಪಾಲ್ಗೊಂಡು ಮಾತನಾಡಿದರು. ಮುಖ್ಯ ಅತಿಥಿಗಳಾಗಿ ಪಾಲ್ಗೊಂಡ ಕ್ಷೇತ್ರ ಶಿಕ್ಷಣಾಧಿಕಾರಿ ವಿ.ವಿ ನಡುವಿನಮನಿ ಮಾತನಾಡಿ, ಕನ್ನಡ ವಿಜ್ಞಾನ ಬರಹ ಹೆಚ್ಚು ಹೆಚ್ಚು ರೂಪಗೊಂಡು ಜನಸಾಮಾನ್ಯರ ಕೈಗೆ ಸಿಗಬೇಕು ಮತ್ತು ಸರಳವಾಗಿ ವಿಜ್ಞಾನ ಸಂಗತಿಗಳನ್ನು ಸಾಮಾನ್ಯ ಜನರಿಗೂ ಅರ್ಥವಾಗುವ ರೀತಿಯಲ್ಲಿ ಪುಸ್ತಕಗಳು ಪ್ರಕಟಗೊಳ್ಳುವ ಅವಶ್ಯಕತೆ ಇದೆ ಎಂದರು. ಡಯಟ್ ಉಪನ್ಯಾಸಕ ಶಂಕರ ಹಡಗಲಿ ಮಾತನಾಡಿ, ವೈಜ್ಞಾನಿಕ ಮನೋಭಾವವನ್ನು ಎಲ್ಲರೂ ರೂಢಿಸಿಕೊಂಡಾಗ ಶೋಷಣೆ ಮುಕ್ತ ಸಮಾಜ ನಿರ್ಮಾಣವಾಗಲು ಸಾಧ್ಯ. ಪ್ರತಿನಿತ್ಯ ಜೀವನದಲ್ಲಿ ನಡೆಯುವ ವಿಷಯಗಳ ಹಿಂದಿರುವ ವಿಜ್ಞಾನದ ಸತ್ಯವನ್ನು ವಿದ್ಯಾರ್ಥಿಗಳಿಗೆ ಸರಳವಾಗಿ ತಿಳಿಸುವದು ಅಗತ್ಯವಾಗಿದೆ ಎಂದರು.



ವಿಜ್ಞಾನ ಬರಹಗಾರರಾದ ರವಿ ದೇವರಡ್ಡಿ ಮಾತನಾಡಿ, ಪ್ರೊ. ಸಿ.ಡಿ ಪಾಟೀಲ ಅವರ ವಿಜ್ಞಾನಕ್ಕೆ ಸಂಬಂಧಿಸಿದಂತೆ 38 ಪುಸ್ತಕಗಳನ್ನು ರಚಿಸಿದ್ದಾರೆ. ಸಂಪಾದಕರಾಗಿ, ವಿಜ್ಞಾನ ಕೇಂದ್ರದ ಸ್ಥಾಪಕರಾಗಿ, ಸಂಘಟಕರಾಗಿ, ರೇಡಿಯೋ-ದೂರದರ್ಶನ ಮೂಲಕ ಉಪನ್ಯಾಸಕರಾಗಿ ಅನುಪಮ ಸೇವೆಯನ್ನು ಸಲ್ಲಿಸಿದ್ದಾರೆಂದು ತಿಳಿಸಿದರು. ಕಾರ್ಯಕ್ರಮದಲ್ಲಿ ಕೆ.ಎಚ್ ಬೇಲೂರ, ಚಂದ್ರಶೇಖರ ವಸ್ತ್ರದ, ಆರ್.ಎಲ್ ಪೊಲೀಸ್‌ಪಾಟೀಲ, ಡಾ. ಜಿ.ಬಿ ಪಾಟೀಲ, ರತ್ನಕ್ಕ ಪಾಟೀಲ, ಪ್ರೊ. ಬಿ.ಬಿ ಪಾಟೀಲ, ಎಂ.ಎಚ್ ಸವದತ್ತಿ, ಡಾ. ನಾಗಪ್ಪ ಸುರಳಿಕೇರಿ, ರಾಜಶೇಖರ ಕರಡಿ, ಎಚ್.ಟಿ ಸಂಜೀವಸ್ವಾಮಿ, ಡಾ.ಬಿ.ಬಿ ಹೊಳಗುಂದಿ, ಜಿ.ಎ ಪಾಟೀಲ, ರತ್ನಾ ಪುರಂತರ, ಉಮಾದೇವಿ ಕಣವಿ, ಡಿ.ಎಸ್ ಬಾಪುರಿ, ಶಶಿಕಾಂತ ಕೊರ್ಲಹಳ್ಳಿ, ಬಿ.ಎಸ್ ಹಿಂಡಿ, ಪ್ರ.ತೊ ನಾರಾಯಣಪುರ, ಮಹೇಶ ಶಟವಾಜಿ, ಸಿ.ಎಂ ಮಾರನಬಸರಿ, ಎಸ್.ಎಫ್ ಬೆನಕಣ್ಣವರ, ಆರ್.ಕೆ ಮೋನೆ, ಜಿ.ಎಚ್ ರಾಜನಾಳ, ಡಾ. ಬಿ.ಎಲ್ ಚವ್ಹಾಣ, ಶಿವಮೂರ್ತಿ ಕುರೇರ, ಡಾ. ಅಂದಯ್ಯ ಅರವಟಗಿಮಠ, ರತ್ನಾ ಪುರಂತರ, ಬಿ.ಬಿ ಹಡಪದ, ಶೇಖರಪ್ಪ ಕಣಗಿನಹಾಳ, ಸತೀಶಕುಮಾರ ಚನ್ನಪ್ಪಗೌಡರ, ಪಿ.ಟಿ ಬೈಲಪ್ಪನವರ ಮುಂತಾದವರು ಹಾಜರಿದ್ದರು. ಡಾ. ದತ್ತಪ್ರಸನ್ನ ಪಾಟೀಲ ನಿರೂಪಿಸಿದರು. ಕಿಶೋರಬಾಬು ನಾಗರಕಟ್ಟಿ ಸ್ವಾಗತಿಸಿದರು. ರಾಮಚಂದ್ರ ಮೋನೆ ವಂದಿಸಿದರು.

> ಅಧ್ಯಕ್ಷತೆ ವಹಿಸಿದ್ದ ಜಿಲ್ಲಾ ಕಸಾಪ ಅಧ್ಯಕ್ಷ ವಿವೇಕಾನಂದಗೌಡ ಪಾಟೀಲ ಮಾತನಾಡಿ, ವಿಜ್ಞಾನ, ಗಣಿತದಂತಹ ಪರಿಕಲ್ಪನೆಗಳನ್ನು ಅರಿಯಲು ಸಾಮಾನ್ಯ ಜನರಿಗೆ ಕಷ್ಟ ಎಂಬ ಮನೋಭಾವ ನೆಲೆಗೊಂಡಿದೆ. ಇದನ್ನು ವಿಜ್ಞಾನ ಸಾಹಿತ್ಯದ ಬರಹದಿಂದ ಹೋಗಲಾಡಿಸುವದು ಅಗತ್ಯ. ಚಂದ್ರಯಾನದಂತಹ ಯಶಸ್ಸು ವಿಜ್ಞಾನದ ಕಡೆಗೆ ವಿದ್ಯಾರ್ಥಿಗಳನ್ನು ಆಕರ್ಷಿಸಿದೆ. ಜನಸಾಮಾನ್ಯರು ಕೂಡಾ ವೈಜ್ಞಾನಿಕ ಸಂಗತಿಗಳನ್ನು ತಿಳಿಯಲು ಉತ್ಸುಕರಾಗಿದ್ದಾರೆ ಎಂದು ತಿಳಿಸಿದರು.

VIJAYA SAKSHI KANNADA DAILY MORNING Editor, Printer, Publisher, & Owned by : Hussainsab M. Shareefanavar, H.No. 130/154, Balaji Nagar, Near Ring Road, Gadag-582103, Dist : Gadag- Karnataka Printed at : Sai Printing Press, Near Joda Maruti Temple, Gadag-582101, Dist : Gadag- Karnataka